Sri S. D. KOTHAWALE (Chikodi).—Mr. Speaker Sir, during the short time at my disposal, I propose to deal with some points raised by my Hon'ble friend Mr. Setty. He dealt with the alleged inefficiency of the police ; he spoke about Home guards; and much about prohibition; though Prohibition could be properly treated under the Demand for Excise. Sir with respect to police, it can be said that there is much room for greater efficiency in its working. I would like to make a few suggestions to make it more efficient and in order to lessen the burden on the police force to a certain extent by certain other methods. If it is possible to take the co-operation of the public in the matter of prevention of crimes and in the matter of detection of crimes, the efficiency of the police can be increased. One such way is to associate village public as well as people in the towns with the functions of the police Department. In the Maharashtra State Sir, there is one institution which is used for the purpose of prevention of offences in the villages it is the establishment of the village police parties. Government has to spend nothing practically on the village police parties. Selected people from villages will be formed into police party and they are given rudimentary training in discipline. The Kothwale is chosen and the village police party functions under the leadership of that Kothawala or the leader. It is the function of the village police-party in the Maharashtra State to have night-rounds particularly during harvest time, to prevent pilfering of crops which are ready for harvesting and prevent possibilties of thefts and house-breaking and something of the type. In some villages, or the Bombay Karnatak area, these village police parties are active when the northern Karnatak area was part of the ex-Bombay State. this institution was also introduced, and it appears after the formation of the new Mysore State, not much encouragement has been given to this institution. If it is possible to revive that institution, it will be very much useful for the purpose of preventing offences with respect to crops and other things and the villagers themselves will be doing very good work. The police can function in two ways. They can prevent the commission of offences and also detect crimes and bring offenders to book where offences are

(Sri S. D. KOTHAWALE)

committed. In my view, the first aspect is more important and the village police parties can be taken advantage of for this purpose.

In regard to the other institution, "Home Guards", my Hon'ble friend Sri. Setty was rather harsh upon it. Home Guards were constituted in the ex-Bombay State.

Sri G. N. PUTTANNA.—Is your suggestion confined to ex-Bombay areas or whether you include the old Mysore areas also.

Sri S. D. KOTHAWALE.—As regards village police parties, I am not aware whether that institution is prevalent in old Mysore area. My suggestion is that if it is not prevalent on this side, it should be extended to the whole State with advantage.

The second institution is that of Home Guards. This institution was conceived in the ex-Bombay State with a view to associate the people with the administration of police Department. Home Guards were recruited on the basis of the capacity of the people concerned to serve the people taking into consideration their character, antecedents, etc. In the District and Taluk headquarters of the former Bombay area, this institution of Home Guards is functioning; but not so vigorously as it used to be before for reasons best known to the authorities concerned. I think it is worthwhile reviewing this position and extend this institution to the whole of the State. I quite see that it should not be confined only to Bombay-Karnatak but should be extended to the whole State. Then the common man will get an opportunity to do some service to the community. He would be given training in discipline and consequently a sense of discipline will be created in our people. They would also be given training in the use of rifles. In Bombay City these Home Guards are given training in many other things also, but that depends upon the necessity that we have in our State to utilize their services. We have in our State an infinite possibility of utilizing the services of Home Guards. These Home Guards have proved to be useful particularly in the enforcement of prohibition.

One of the difficulties mentioned by my friend Sri Srinivasa Shetty is that it is not possible to find even witnesses to give evidence against offenders in courts of law. He is right to a certain extent. The point is whether in the enforcement of prohibition we have made an all-out effort. My friends will agree that such an all-out effort has not been made. A reform of this magnitude in society to remove an evil which has come down to us through centuries requires lot of time on the part of both the public and the Government.

Sri V. SRINIVASA SHETTY.—Does it not mean that the Congress Government was not serious all these years in enforcement of prohibition?

Sri S. D. KOTHAWALE.—The Congress Government was serious and the Congress Party also was serious. There is no doubt about that. My only point is that all-out effort has not so far been made for the

success of a social reform of such a magnitude. Unless the public co-operate in this matter the reform is bound to fail. Our experience of the enforcement of prohibition is not very encouraging. I have given expression to my views on this matter on more than one occasion and I do not want to repeat them here. Before discarding such a reform, we have to bear in mind that this reform is in the interest of the poor people and for their physical, moral and economical upliftment. On this point all of us are agreed, but our difference of opinion is only on the actual enforcement method. If there is any other better method, we would welcome it, but it is not possible to give up this reform simply because our experience has not been encouraging. That is why I have suggested the extension of the institution of village defence parties and Home Guards throughout the State. We find in the villages certain persons engage themselves in the manufacture of illicit liquor and the sale thereof. They are not many in number, but they are very violent people and hence people are afraid of them.

Sri C. M. ARUMUGHAM.— Sir, the former Chief Minister of Mysore Sri Hanumanthaiah said in a public meeting in K. G. F. that he was not for prohibition. Is he prepared to scrap it? May I know his considered views?

Sri S. D. KOTHAWALE.—I was saying a few goondas engage themselves in this illicit trade in the villages. If we enlist public co-operation to fight them and organise a band of 10 to 20 or 100 persons in the village to form a village defence party, they will be able to successfully fight the mischievous character of this set of goondas who engage themselves in this illicit trade.

Sri G. N. PUTTANNA.—Will you Please explain what is to be done by the public and the Government ? The present Home Minister when he went to Shimoga detected so many cases on his own accord. What I mean to say is that Government has to play a greater part than the public and the Press. The Hon'ble Minister himself has detected a number of such cases. So why not Government do it ?

Sri S. D. KOTHAWALE.— I am sorry I cannot agree with my friend. Unless the public co-operate, no Government neither the Minister nor the police officer, will be in a position to do anything in the matter. This is the case not only in prohibition cases but also even in murder cases. So I have to say with regret that civic sense in our people has not come up to the extent we desire.

4–00 P.M.

There may be many reasons ; I am not here to say much about it ; but of course you have got to make an appeal to the civic sense of the people. I am sure if we can infuse some courage, infuse some spirit, something of that type into the good elements that are existing in the villages, the people will be forthcoming and helping in the enforcement of not only prohibition law but all laws, penal and civil. The organised village party can go from house to house and can bring home to the

(Sri S. D. KOTHAWALE)

people the undesirability of this drink evil and appeal to them that in the interest of themselves, in the interests of the people and the society and the country, they should give it up. If such public opinion is built up. I am sure prohibition has got a great chance of success. The Hon'ble Members of this House know that when prohibition Law just in existence was there, Mahatma Gandhi was going from one end of India to another, telling people that prohibition was a good thing. In those bureacratic days we used to picket the Liquor shops and prevail upon the people not to enter the shop and drink. What happened? Even the picketing had a desired effect. People hesitated to enter the shops. Now what is happening ? People will push us aside and enter the shop. The reason, is, public opinion has become less effective. People are not taking keen interest in the matter. Therefore, we cannot say that the public are Co-operating with the police. We cannot declare that prohibition is a failure, but it has not succeded to the extent that we desire. Of course, we have got to remember that we have not done all at our effort that this measure deserves. The home Minister may kindly take note of it. I feel without the Co-operation of the public the police cannot do anything ; even in the matter of ordinary administration, enforcement of penal laws, unless the public co-operate, the penal code will remain only on paper without any enforcement. That is the position. Let us make an appeal to the public, to their civic sense to help not only in this measure but other measures also. That is the way of making the policemen efficient. There is no use of talking about corruption and other things when we ourselves are not doing needful.

Sri J. B. MALLARADHYA.—When Government has taken the responsibility of enforcing prohibition, what is the fun of blaming the public ? What efforts have you made so far ? Why do you undertake things which you cannot manage properly ; why do you want to proceed on idealogical grounds ?

Sri S. D. KOTHAWALE.—We in this House pass certain legislation Government enforce it, it does not do it by itself ; it acts on behalf of myself, yourself, on behalf of the whole society including Mr. Mallaradhya. That is the constitutional position which he should remember. He cannot shirk his responsibility. Government is expected to do these things and succeed in doing these things only when the public Co-operate.

Sri B. L. NARAYANA SWAMY.—My friend is always referring to the public co-operation. May I know what exactly he means by public co-operation ?

Sri S.D. KOTHAWALE.–My friend Mr. Narayanaswamy knows about it. When prohibition is there, it will be his duty to prevent acts cotravening the law, to report the matter, to give evidence in the matter, etc., Full effort must be bestowed upon the enforcement of this

measure and Government would be ever willing to do its part and would associate with members of the public, by organising village parties, by organising Home Gaurds, and doing everything needed for the enforcement, of this measure and not only this measure but other measures also. Government always seek the co-operation of the public ; so long as we don't do this, we have no right to say that prohibition has failed. It is of great magnitude ; we have not given it a fair trial. A habit which is ingrained in the people for centuries cannot be eradicated in a day. If the Hon'ble Members are sincere about it, I would make an appeal to them to make out an effort and make it a success. The opposition to the institution of home gaurds by Sri Srinivasa Shetty is not correct. For want of sufficient time I cannot enlarge on that subject, but my only appeal to the Government is that the institution should be vigorously maintained and should be extended throughout the State.

With these words, I support the Demand.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಿ.ಎಸ್.ಪಿ.ಗೆ ಒಂದು, ಕಾಂಗ್ರೆಸ್ಸಿಗೆ ಒಂದು, ಇಂಡಿಪೆಂಡೆಂಟಿಗೆ ಒಂದು ಹೀಗೆ ಛಾನ್ಸ್ ಕೊಡುತ್ತಿದ್ದರು. ಈಗ ಒಂದು ಪಿ.ಎಸ್.ಪಿ. ಒಂದು ಕಾಂಗ್ರೆಸ್ ಆಯಿತು. ಪುನಃ ಪಿ.ಎಸ್.ಪಿ. ಮೆಂಬರನ್ನೇ ಮಾತನಾಡಲು ಕರೆದರಲ್ಲಾ! What is the Procedure? ಶ್ರೀನಿವಾಸಶೆಟ್ಟರು ಪಿ.ಎಸ್.ಪಿ. ಆಯಿತು. ಕೊತಾವಳೆಯವರು ಕಾಂಗ್ರೆಸ್ ಆಯಿತು.

ಅಧ್ಯಕ್ಷರು.—ಶ್ರೀಮಾನ್ ಲಿಂಗೇಗೌಡರು ಮಾತನಾಡಿದಮೇಲೆ ಛಾನ್ಸ್ ಕೊಡೋಣ.

ಡಾ. ಬಿ. ಕೆ. ನಾಗೂರ್.—ಮೂರು ಡಿಮ್ಯಾಂಡುಗಳನ್ನು ಒಂದೇ ದಿವಸದಲ್ಲಿ ಬಿಡಿದು ತೆಗೆಯೋಣವೆಂದಿದ್ದಾರೆ. ಇವರದು ಆದಕೂಡಲೆ ಯಾರಾದರೂ ಇಂಡಿಪೆಂಡೆಂಟಿಗೆ ಕೊಡಿರಿ.

ಅಧ್ಯಕ್ಷರು.—ಕೊಡೋಣ.

†ಶ್ರೀ ಎಂ. ಲಿಂಗೇಗೌಡ (ಕನಕಪುರ).—ಸ್ವಾಮಿ, ಕೋರ್ಟುಗಳಲ್ಲಿ ಎಲ್ಲಾ ಎಲೆಕ್ಷನ್ ಕೇಸುಗಳಲ್ಲಿಯೂ ಕೂಡ ಬಹಳ ನಿಧಾನವಾಗುತ್ತಿದೆ. ಹೊಸದಾಗಿ ತಾವು ಏರ್ಪಾಟು ಮಾಡಿದ ಪಂಚಾಯಿತಿ ಎಲೆಕ್ಷನ್ ಮತ್ತು ತಾಲ್ಲೂಕು ಬೋರ್ಡು ಎಲೆಕ್ಷನ್‌ಗಳಲ್ಲಿ, ಸಣ್ಣಸಣ್ಣ ಕಾರಣಗಳಿಗೆಲ್ಲಾ ಅನಾವಶ್ಯಕವಾಗಿ ಕೆಲವು ಅರ್ಜಿಗಳು ರಿಟರ್ನ್ ಆಗಿವೆ. 3-4 ವರ್ಷಗಳವರೆಗೂ ಎಲೆಕ್ಷನ್ ಕೇಸುಗಳು ಕೋರ್ಟಿನಲ್ಲಿ ನಡೆಯುತ್ತಾ ಬಂದರೆ ಪ್ರಯೋಜನವಾಗುವುದಿಲ್ಲ. ಆದಷ್ಟುಮಟ್ಟಿಗೆ ಆ ಕೇಸುಗಳಿಗೆ ಟಾಪ್‌ಪ್ರಯಾರಿಟಿ ಕೊಟ್ಟು, ಜಾಗ್ರತೆಯಾಗಿ ನಡೆಸುವುದಕ್ಕೆ ಏರ್ಪಾಡು ಮಾಡಬೇಕಾದ್ದು ಅಗತ್ಯವೆಂದು ಹೇಳುತ್ತೇನೆ.

ಇನ್ನು ಪೋಲೀಸಿನ ವಿಷಯ ಎಷ್ಟು ಹೇಳಿದರೂ ತೀರುವುದಿಲ್ಲ ಎಂದು ಖಂಡಿತವಾಗಿ ಹೇಳಬಹುದು. ಪೋಲೀಸ್ ಮೊರೇಲ್ ಕೆಟ್ಟಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಪೋಲೀಸಿನಲ್ಲಿ ಲಂಚ ಜಾಸ್ತಿಯಾಗಿದೆ; ಕುಡಿತ ಜಾಸ್ತಿಯಾಗಿದೆ. ಇವೆರಡೂ ತಪ್ಪದೆಹೋದರೆ ಪೋಲೀಸ್ ಅಡ್ಮಿನಿಸ್ಟ್ರೇಷನ್ ಚೆನ್ನಾಗಿರುವುದಿಲ್ಲವೆಂದು ಖಚಿತವಾಗಿ ನಾವು ತಿಳಿದುಕೊಳ್ಳಬೇಕಾಗಿದೆ. ಸಾಧಾರಣವಾಗಿ ಎಲ್ಲಾ ಪೋಲೀಸರೂ ಲಂಚ ತೆಗೆದುಕೊಳ್ಳುತ್ತಾರೆಂದು ನಾನು ಆಪಾದನೆ ಮಾಡುತ್ತಾ ಇಲ್ಲ. ಹೆಚ್ಚಿಗೆ ಪೋಲೀಸರು ಲಂಚ ತೆಗೆದುಕೊಳ್ಳುವುದು ಬಹಳ ರೂಢಿಯಾಗಿಬಿಟ್ಟಿದೆ. ಯಾರಾದರೂ ಕಂಪ್ಲೇಂಟ್ ಕೊಟ್ಟರೆ, ಕಂಪ್ಲೇನೆಂಟ್ ಲಂಚ ಕೊಡುವವರೆಗೂ ಪೋಲೀಸರು ವಿಚಾರಣೆ ಮಾಡುವುದಕ್ಕೆ ಹೋಗುವುದೇ ಇಲ್ಲ. ಒಂದು ಪಾರ್ಟಿಯಿಂದ ಕಂಪ್ಲೇಂಟ್ ಬಂದರೆ, ಇನ್ನೊಂದು ಪಾರ್ಟಿಯವರಿಗೆ ಈ ರೀತಿ ನಿಮ್ಮ ಮೇಲೆ ಕಂಪ್ಲೇಂಟ್ ಬಂದಿದೆ ಎಂದು ಹೇಳಿ ಅವರಿಂದ

(ಶ್ರೀ ಎಂ. ಲಿಂಗೇಗೌಡ)

ದುಡ್ಡು ತೆಗೆದುಕೊಂಡು, ದುಡ್ಡು ಯಾರು ಕೊಡುತ್ತಾರೆಯೋ ಅವರನ್ನು ಕನ್‌ವಿನಿಯಂಟಾಗಿ ಅಪರಾಧದಿಂದ ತಪ್ಪಿಸುತ್ತಾರೆ. ಇದರಿಂದ ಪೋಲೀಸ್ ಅಡ್ಮಿನಿಸ್ಟ್ರೆಶನ್ ಕೆಟ್ಟುಹೋಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಸಾಧಾರಣವಾಗಿ ನೀವು ಎಲ್ಲ ಪ್ರೊಹಿಬಿಶನ್ ನಡೆಸುತ್ತಿದ್ದೀರೋ, ಅಲ್ಲ ಲೋಯರ್ ಸ್ಟಾಟಾರಾದ ಕಾನ್‌ಸ್ಟೇಬಲ್ ಮೊದಲ್ಗೊಂಡು ಸ್ವಲ್ಪ ಆಫೀಸರವರೆಗೂ ಭಟ್ಟಿಶರಾಬು ಕುಡಿಯುವುದು ಬಹಳ ಜಾಸ್ತಿಯಾಗಿದೆ. ಬರುತ್ತಾ ಬರುತ್ತಾ ಈಗ ಆಫೀಸರುಗಳಲ್ಲಿ ಕುಡಿಯುವುದು ಫ್ಯಾಶನ್ ಆಗಿಬಿಟ್ಟಿದೆ; ಮೊದಲು ಬೀರ್ ತೆಗೆದುಕೊಳ್ಳುವುದು, ಆಮೇಲೆ ವಿಸ್ಕಿ, ಬ್ರಾಂಡಿ ತೆಗೆದುಕೊಳ್ಳುವುದು. ಸಾಧಾರಣವಾಗಿ ಕುಡಿತ ಆಫೀಸರುಗಳಲ್ಲಿ ಹೆಚ್ಚಾಗಿ ಅವರುಗಳಿಂದ ನಿಷ್ಪಕ್ಷತವಾಗಿ ಅಡ್ಮಿನಿಸ್ಟ್ರೇಶನ್ ಆಗುತ್ತಿಲ್ಲ ಎನ್ನುವುದನ್ನು ನಾನು ವಿಶಾದದಿಂದ ಹೇಳಬೇಕಾಗಿದೆ. ಇದನ್ನು ತಪ್ಪಿಸುತ್ತಾರೋ ನಾನು ಕಾಣೆ.

ಅಧ್ಯಕ್ಷರು.—ಎಲ್ಲರೂ ಹಾಗೆ ಮಾಡಲಾರರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕುಡಿದರೆ ತಲೆ ಓಡುತ್ತದೆ ಸ್ವಾಮಿ!

ಶ್ರೀ ಎಂ. ಲಿಂಗೇಗೌಡ.—ಎಲ್ಲರೂ ಮಾಡುತ್ತಿದ್ದಾರೆಂದು ನಾನು ಅಪಾದನೆ ಮಾಡುತ್ತಾ ಇಲ್ಲ ಹೆಚ್ಚುಮಂದಿ ಮಾಡುತ್ತಾ ಇದ್ದಾರೆ. ಅಷ್ಟುಮಾತ್ರ ಖಂಡಿತವಾಗಿ ಹೇಳಬಹುದು. ಕುಡಿಯದೆ ಇರುವವರೂ ಇದ್ದಾರೆ. ಆದರೆ ಕುಡಿಯುವವರೇ ಹೆಚ್ಚಾಗಿ ಇದ್ದಾರೆ. ಈ ಕಾರಣದಿಂದ ಸರ್ಕಾರದವರು ಈಕಡೆ ಹೆಚ್ಚಿಗೆ ಗಮನಕೊಡಬೇಕು. ದೊಡ್ಡದೊಡ್ಡ ಅಫೀಸರುಗಳನ್ನು ತಾವು ಹಿಡಿಯುವುದು ಬಹಳ ಸುಲಭ, ನಮ್ಮ ಹೋಂ ಮಿನಿಸ್ಟರು ಮನಸ್ಸು ಮಾಡಿದರೆ ದೊಡ್ಡವರನ್ನು ಹಿಡಿಯಬಹದು. ಸಾಧಾರಣವಾಗಿ ಕ್ಲಬ್ಬುಗಳಲ್ಲಿ ಇವರು ಸಂಜೆಮೇಲೆ ಸೇರುತ್ತಾರೆಂದು ಎಲ್ಲರಿಗೂ ಗೊತ್ತಿರುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ. ಈ ಕಾರಣದಿಂದ ಕ್ಲಬ್ಬಿಗೆ ಹೋಗುವವರೆಲ್ಲರೂ ಕುಡಿಯುತ್ತಾರೆ ಎಂದು ಹೇಳುತ್ತಿಲ್ಲ. ಕುಡಿಯದೆ ಹೋಗುವವರೂ ಇದ್ದಾರೆ. ಕುಡಿಯುವವರೂ ಇದ್ದಾರೆ. ಇಂಥವರಮೇಲೆ ನಿಗಾ ಇಟ್ಟು ಅಧಿಕಾರಿಗಳಲ್ಲಿ ಕುಡಿತವನ್ನೇ ತಪ್ಪಿಸಿದರೆ ಪೋಲೀಸ್ ಆಡಳಿತ ಬಹಳಮಟ್ಟಿಗೆ ಚೆನ್ನಾಗಿ ಆಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬರೀ ಸಬ್‌ಇನ್‌ಸ್ಪೆಕ್ಟರೇ ಕುಡಿಯುತ್ತಾರೋ ಅಥವ ಮೇಲಿನವರೂ ಕುಡಿಯುತ್ತಾರೋ!

ಶ್ರೀ ಎಂ. ಲಿಂಗೇಗೌಡ.—ಮೊದಲಿನಿಂದ ಕೊನೆಯವರಿಗೂ.........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—I.G.P. ಯಿಂದಲೂ ಕುಡಿಯುತ್ತಾರೆ!

Mr. SPEAKER.—He should not mention names.

ಶ್ರೀ ಎಂ. ಲಿಂಗೇಗೌಡ.—ಅದನ್ನು ನಾನು ಹೇಳುವುದಿಲ್ಲ. ದೊಡ್ಡದೊಡ್ಡ ಆಫೀಸರುಗಳೂ ಕುಡಿಯುತ್ತಾರೆಂದು ನಾನು ಹೇಳಿದೆ. ಹೆಸರು ಹೇಳುವುದಕ್ಕೆ ಸಿದ್ಧನಿದ್ದೇನೆ. ದೊಡ್ಡವರು ಕುಡಿಯುವುದರಿಂದ ಸಣ್ಣವರಲ್ಲಿ ತಾವೂ ಕುಡಿಯೋಣವೆಂಬ ಮನೋಭಾವ ಬಂದುಬಿಟ್ಟಿದೆ.

ಅಧ್ಯಕ್ಷರು.—ಸ್ಟೇಟ್‌ಮೆಂಟ್ ಮಾಡುವಾಗ ಟೀಕಿಸುವುದಕ್ಕೆ ಸ್ವಲ್ಪ ಅವಕಾಶವಿದೆ. ರಿಮಾರ್ಕ್ಸ್ ಮಾಡುವುದಕ್ಕೆ ಅಡ್ಡಿ ಪಡಿಸುವುದಿಲ್ಲ. ಆದರೆ ಕೆಲವು ವಿಷಯಗಳಲ್ಲಿ ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ.

ಶ್ರೀ ಎಂ. ಲಿಂಗೇಗೌಡ.—ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಹೆಸರು ಹೇಳುವುದಕ್ಕೆ ತಯಾರಿದ್ದೇನೆ. ರಿಸ್ಕ್ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ. ಸತ್ಯಾಂಶ ಎಲ್ಲಿಯಾದರೂ ಹೇಳುತ್ತೇನೆ. ಶಿಕ್ಷೆ ಆದರೂ ಅನುಭವಿಸುವುದಕ್ಕೆ ತಯಾರಿದ್ದೇನೆ. ನಾನು ಹೆಸರು ಹೇಳಲೂ ಇಲ್ಲ. ಈಗ ಹೇಳುವುದೂ ಇಲ್ಲ.

Mr. SPEAKER.—Sri Muckannappa should not mention the names.

Sri C. J. MUCKANNAPPA.—Sir, suppose, I know that a certain officer drinks; what is wrong in saying it?

Mr. SPEAKER.—It is not correct. He can make suggestions in the matter of enforcement successfully and not mention names of officers.

†Sri J. B. MALLARADHYA (Nanjangud).—May I respectfully bring to your notice one thing Sir? The integrity and character of a Sub-Inspector individually, is to him as important as the status and integrity of the highest officer in the department. When the name of the Sub-Inspector is mentioned, the Hon'ble Speaker does not take any objection; but, when my friend Mr. Muckannappa took the name of I.G.P., you object to it. I know that names should not be taken in this House. But, if we say 'from top to bottom' or 'from the highest to the lowest', from the I.G.P. to the Police Constable, there is nothing wrong.

Sri G. N. PUTTANNA.—On a point of order. We are now discussing the demands. My friend Sri Linge Gowda was saying that from his experience he has come to know that from top to bottom the police are addicted to bad habits. He did not say this with the intention of condemning or defaming are accusing any individual by name or designation. There is no insinuation or causing affront to anyone's reputation. My appeal to the Chair is this : in the course of the debates to come we may have many occasions to refer to so many higher authorities, without mentioning names. My point is that the Chair should not object. Members have a privilege and a duty to bring such cases to the attention of Government.

Sri M. C. NARASIMHAN.—The whole point is meaningless. The allegation is that a particular friend drinks. Drinking is not an offence in a wet area. Where then is the occasion in stretching the point further ?

Mr. CHAIRMAN.—It may be a defamatory statement.

Sri C. J. MUCKANNAPPA.—The rules of procedure allows certain things and disallows others. I would request the Chair to find out if such a statement is defamatory.

Sri G. VENKATAI GOWDA.—Supposing I am able to substantiate the allegations. How would it become defamatory ?

Mr. CHAIRMAN.—As for as possible it would be better to avoid mentioning or bringing in high dignataries and high-ranking officers. After all when members say everybody from I.G.P. to a constable is drinking, it means that the I.G.P., who is the only officer holding that rank, is also drinking. This point flashed into my mind and that is the reason I suggested there it would be better not to bring in high officers.

Sri C. J. MUCKANNAPPA.—Sir, this conflicts with a ruling given by the Speaker that allegations may be made without bringing in names.

Sri H. M. CHANNABASAPPA.—I rise to a point of order. I wish to draw attention of the House to rule 298 which prescribes a procedure when the Hon'ble Speaker is on his legs. Whenever the Speaker rises, he shall be heard in silence and any member who is then speaking or offering to speak shall immediately sit down. That is a rule which we have prescribed for ourselves. It is not correct on the part of anybody, including members on this side, to interfere when the Chair is speaking.

From what I could make out from the debate that is going on, the Chair's intention was that as far as possible let us not drag in here men who cannot defend themselves. Subject to that, it is open to Hon'ble Members to make any remarks they please. Let us not make much of it.

Sri C. J. MUCKANNAPPA.—I differ from the Hon'ble Home Minister for this reason that when the Speaker rises, we should sit, but the Speaker was sitting and speaking. Our standing therefore does not amount to an interference. (*laughter*).

Mr. CHAIRMAN.—Sri Linge Gowda will continue.

ಶ್ರೀ ಎಂ. ಲಿಂಗೇಗೌಡ.—ನಾನು ಪೋಲೀಸ್ ಇಲಾಖೆಯಲ್ಲಿ ಕುಡಿತ-ಲಂಚಕೋರತನ ಜಾಸ್ತಿಯಾಗುತ್ತಿದೆಯೆಂದು ಹೇಳುತ್ತಿದ್ದ ಕಾಲದಲ್ಲಿ ಕೆಲವರು ಈ ಮಧ್ಯೆ ಪ್ರಶ್ನೆಗಳನ್ನು ಕೇಳಿದ್ದರಿಂದ ನನಗೆ ಕೊಟ್ಟಿದ್ದ ಕಾಲಾವಧಿಯಲ್ಲಿ ಹತ್ತು ನಿಮಿಷಗಳು ವೇಸ್ಟಾದಂತಾಯಿತು. ಆದರೆ ನಾನು ಹೇಳತಕ್ಕ ಈ ವಿಚಾರಗಳನ್ನು ಸರ್ಕಾರದವರು ತೀವ್ರವಾಗಿ ತುಲನ ಮಾಡಿ ನೋಡತಕ್ಕ ವಿಷಯವಾಗಿದೆ. ಹೀಗೆ ದಿನ ದಿನಕ್ಕೂ ಜಾಸ್ತಿಯಾಗುತ್ತಿರುವ ಕುಡಿತ ಮತ್ತು ಲಂಚಗುಳಿತನವನ್ನು ಸರ್ಕಾರದವರು ದಯವಿಟ್ಟು ನಿಲ್ಲಿಸಬೇಕು. ಇಲ್ಲಿಯತನಕ ನಾನು ಲಂಚ ಗುಳಿತನದ ವಿಚಾರವಾಗಿ ಮಾತನಾಡುತ್ತಿದ್ದೆ. ಇದೇ ಸಂಧರ್ಭದಲ್ಲಿ ಸರ್ಕಾರದವರ ಗಮನಕ್ಕೆ ನಾನು ತರಬೇಕೆಂದಿರುವ ಮತ್ತೊಂದು ವಿಷಯವೇನೆಂದರೆ-ಜೂಜು ಮತ್ತು ಇಸ್ಪೀಟ್ ಆಟಗಳು. ಇಲ್ಲಿಯತನಕ ಈ ಇಸ್ಪೀಟ್ ಆಟ ಮನೆಯಲ್ಲೇ ನಡೆಯುತ್ತಿತ್ತು. ಈಗ ಇದು ಕಾಡುಗಳಲ್ಲೂ, ತೋಟಗಳಲ್ಲೂ ಹೀಗೆ ಬಯಲಿನಲ್ಲಿ ನಡೆಯುವುದಕ್ಕೆ ಪ್ರಾರಂಭವಾಗಿದೆ. ಈ ವಿಚಾರದಲ್ಲಿ ಪೋಲೀಸಿನವರು ಪ್ರಾಯಶಃ ಟರ್ನ್‌ಗಳನ್ನು ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ಬೆಳಗ್ಗೆ ಒಬ್ಬ ಕಾನ್ಸ್ಟೇಬಲ್ ಮಫ್ಟಿಯಲ್ಲಿ ಹೋಗಿ ಒಂದೆರಡು ರೂಪಾಯಿಗಳ ಮಾಮೂಲಿ ವಸೂಲ್ಮಾಡಿಕೊಂಡು ಬಂದರೆ ಸಾಯಂಕಾಲಕ್ಕೆ ಇನ್ನೊಬ್ಬ ಹೋಗಿ ಮಾಮೂಲಿ ವಸೂಲ್ಮಾಡಿಕೊಂಡು ಬರುತ್ತಾನೆ. ಕುಡಿತ ನಿಲ್ಲಿಸಲು ಹೊರಟ ಹಾದಿಯಲ್ಲಿ ಈಗ ಈ ಜೂಜಾಟಗಳು ಜಾಸ್ತಿ ಆಗಿದೆ. ಲಂಚ ಬೆಳೆಯುತ್ತಿದೆ. ಸರ್ಕಾರದವರು ಈ ವಿಚಾರಕ್ಕೆ ಕೂಡಲೇ ಮನಸ್ಸು ಕೊಟ್ಟು ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಇನ್ನು ಸಿಟಿಗಳಲ್ಲಿರತಕ್ಕ ವೇಶ್ಯಾಗೃಹಗಳ ಹತ್ತಿರವೂ ಪೋಲೀಸರ ತಿರುಗಾಟವಿರುತ್ತೆ. ಇಲ್ಲೆಲ್ಲಾ ಮಾಮೂಲಾಗಿ ಲಂಚವನ್ನು ವಸೂಲ್ಮಾಡುತ್ತಿದ್ದಾರೆ. ಈ ವಿಚಾರಗಳ ಮೇಲೆ ಸರ್ಕಾರದವರು ಸಾಕಷ್ಟು ನಿಗಾ ಇಟ್ಟಿಲ್ಲವಾದ ಕಾರಣ ಪೋಲೀಸ್ ಅಡ್ಮಿನಿಸ್ಟ್ರೇಷನ್ನಿಗೆ ಬಹಳ ಕೆಟ್ಟ ಹೆಸರು ಬಂದಿದೆ. ಇದನ್ನೆಲ್ಲ ಕೂಡಲೆ ಸರಿಪಡಿಸಬೇಕು.

ಇನ್ನು ಈ ಪಾನ ನಿರೋಧವನ್ನು ಜಾರಿಗೆ ತಂದು ಇಲ್ಲಿಗಾಗಲೇ 10–13 ವರ್ಷಗಳ ಮೇಲಾಯಿತು. ಇದನ್ನು ದೇಶಾದ್ಯಂತವೂ ಏಕಕಾಲದಲ್ಲೇ ಜಾರಿಗೆ ತರಲಿಲ್ಲ. ಒಂದು ಸ್ಥಳವಾದ ಮೇಲೆ ಮತ್ತೊಂದು ಸ್ಥಳಕ್ಕೆ ಈ ಪ್ರೊಹಿಬಿಷನನ್ನು ಮುಂದುವರಿಸಲಾಗುತ್ತಿದೆ. ಇದರಿಂದ ದೇಶದಲ್ಲಿ ಕಳ್ಳಭಟ್ಟಿ ಷರಾಬಿನ ತಯಾರಿ ಎಲ್ಲೆಲ್ಲೂ ಹೆಚ್ಚಾಗುತ್ತಿದೆ. ಇದರಿಂದ ಜನರ ಆರೋಗ್ಯ ಕೆಡುತ್ತಿದೆ. ಆದರೆ ಈಗ ನಮ್ಮ ತಾಲ್ಲೂಕಿನಲ್ಲಿ ಈ ಪ್ರೊಹಿಬಿಷನ್ ಜಾರೀಲಿಲ್ಲ. ಆದರೆ ಇಲ್ಲಿಂದ ತಯಾರಿಸಿ ಬೇರೆ ಕಡೆಗಳಿಗೂ ರವಾನೆ ಮಾಡುತ್ತಿದ್ದಾರೆ. ಇದಕ್ಕೆಲ್ಲ ಏಜೆಂಟರುಗಳಿದ್ದಾರೆ. ಈಗ 8 ಡ್ರಾಂಗಳ ಒಂದು ಬಾಟಲಿಗೆ ರೂ. 1—12—0 ಪ್ರಕಾರ ಮಾರಾಟವಾಗುತ್ತಿದೆಯಂತೆ. ಸರ್ಕಾರದವರು ತಯಾರಿಸತಕ್ಕದ್ದರಲ್ಲೇ ದೋಷವಿರುತ್ತೆಂದು ಹೇಳುವಾಗ ಈ ಭಟ್ಟಿ ಷರಾಬನ್ನು ಕುಡಿದರೆ ಕೇಳಬೇಕೇ? ಜನರ ಆರೋಗ್ಯ ಕೆಟ್ಟು ಹಾಳಾಗುತ್ತಿದೆ. ಆದರೆ ಯಾರು ಏನೇ ಹೇಳಲಿ, ಸರ್ಕಾರದವರಿಗೆ ಈ ಕುಡಿತವನ್ನು ತಪ್ಪಿಸುವುದಕ್ಕೆ ಖಂಡಿತ ಇವರಿಂದ ಸಾಧ್ಯವಿಲ್ಲ. ಇತ್ತೀಚೆಗೆ ಈ ಕುಡಿತವು ಒಂದು ಫ್ಯಾಷನ್ ಆಗಿಬಿಟ್ಟಿದೆ. ಕುಡಿತ ಪಾರ್ಟಿಗಳೆಂದರೆ ಅದೊಂದು ದೊಡ್ಡ ಮರ್ಯಾದೆ ಎಂತ ಕೆಲವು ಅಂತಸ್ತಿನ ಜನರು ಭಾವಿಸುವಂತೆ ಕಾಣುತ್ತಿದೆ. ಈ ದಿವಸ ಕೆಲವು ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ದಿಶೆಯಲ್ಲೇ ಈ ದುರಭ್ಯಾಸಕ್ಕೆ ಬಿದ್ದಿದ್ದಾರೆ. ಹೀಗೆ ಕುಡಿತವನ್ನು ಒಂದಾವರ್ತಿ ಅಭ್ಯಾಸ ಮಾಡಿಕೊಂಡಮೇಲೆ ಇದನ್ನು ಬಿಡುವುದು ಬಹಳ ಕಷ್ಟ; ಮುಂದೆ ಇದರಿಂದ ಅನೇಕ ತೊಂದರೆಗಳಾಗುತ್ತವೆ. ಆದರೆ ಇದರಲ್ಲಿ ಒಂದು ವಿಚಿತ್ರವಾಗಿದೆ. ಈ ದಿವಸ ನಾನು ಇಲ್ಲಿ ಒಬ್ಬ ಮೆಂಬರಾಗಿದ್ದೇನೆ. ನನಗೆ ಈ ಕುಡಿತದ ಅಭ್ಯಾಸವಿರುವಾಗ ನಾನು ಈ ಸಭೆಯಲ್ಲಿ ಕುಳಿತು ಈ ಕುಡಿತದ ಹ್ಯಾಬಿಟ್ಟನ್ನು ತಪ್ಪಿಸಲೇಬೇಕೆಂದು ವಾದ ಮಾಡುತ್ತಿದ್ದರೆ ಅದಕ್ಕೆ ಏನೆಂತ ಹೇಳಬೇಕೋ ತಿಳಿಯದು ! ಹೀಗೆ ಹೇಳಲು ನಾಲಗೆಯಾದರೂ ಹೇಗೆ ಬರುತ್ತದೆ ?

4–30 P.M.

ಎಲ್ಲಾ ಕಡೆ ಕುಡಿಯುವುದು ಇಲ್ಲಾ ಎಂದು ಹೇಳುತ್ತಾರೆ. ಕಾನೂನು ಮಾಡುವವರು ಕುಡಿಯುವುದು ಬೇಡ ಎಂದು ಹೇಳುತ್ತಾರೆ. ಆದರೆ ಅವರು ಆತ್ಮವಂಚನೆ ಮಾಡಬಾರದು. ಆತ್ಮವಂಚನೆ ಮಾಡಿದರೆ ದೇಶಕ್ಕೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಏನು ಮಾಡಿದರೂ ಸಹ ಕುಡಿಯುವುದನ್ನು ಮಾತ್ರ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಯವದೇ ಶಿಕ್ಷೆ ವಿಧಿಸಿದರೂ ಸಹ ಅದು ನಿಲ್ಲುವದಿಲ್ಲ. ಅದಕ್ಕೋಸ್ಕರ ನಾನು ಹೇಳುವುದು ಏನೆಂದರೆ ಅದಷ್ಟು ಜಾಗ್ರತೆ ಪ್ರೊಹಿಬಿಷನ್ ತೆಗೆದುಬಿಡುವುದು ಉತ್ತಮ. ಈಗ ಏನಾಗಿದೆ ಎಂದರೆ, ದೇಶಕ್ಕೆ ನಷ್ಟವಾಗುತ್ತಿದೆ. ಮತ್ತು ಜನತೆಯ ಆರೋಗ್ಯ ಸಹ ನಷ್ಟವಾಗುತ್ತಿದೆ. ಪ್ರೊಹಿಬಿಷನ್ ವಿಚಾರದಲ್ಲಿ ಕರಪ್ಷನ್ ಸಹ ಇದೆ. ಪ್ರೊಹಿಬಿಶನ್ ಇರುವ ಕಡೆ ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಾರೆ. ಅದನ್ನು ಎಲ್ಲಿ ತಯಾರು ಮಾಡುತ್ತಾರೆ ಎಂಬುದು ಪೋಲೀಸಿನವರಿಗೆ ಗೊತ್ತಿದ್ದರೂ ಸಹ ಅಂಥವರ ಮೇಲೆ ಕೇಸು ಹಾಕುವದಿಲ್ಲ, ಅಕಸ್ಮಾತ್ ಎಲ್ಲಿಯೋ ಒಂದು ಕಡೆ ಒಂದು ಕೇಸು ಹಾಕಿದರೂ ಕೂಡ ಅದರ ನಾಟಕ ಮಾತ್ರ ಮಾಡುತ್ತಾರೆ. ಕಳ್ಳ ಸಾರಾಯಿ ವ್ಯಾಪಾರ ಮಾಡುವವರು ಹೆಂಡವನ್ನು ಪೀಪಾಯಿಯಲ್ಲಿ ಹಾಕಿಕೊಂಡು ರಸ್ತೆಯಲ್ಲಿ ಬರುತ್ತಾರೆ. ಯಾಕೆಂದರೆ ಪೋಲೀಸಿನವರಿಗೆ ಗೊತ್ತಿಲ್ಲದೆ ಇಂಥದ್ದನ್ನು ಮಾಡಲು ಸಾಧ್ಯವಿಲ್ಲ. ಅವರ ಮಾಮೂಲು ಇದ್ದೇ ಇರುತ್ತದೆ. ಈ ರೀತಿ ಮಾಮೂಲು ಇಲ್ಲದೆ ಕೆಲಸ ನಡೆಯುವದಿಲ್ಲ. ಪೋಲೀಸಿನವರು ಕೂಡ ಅವರ ಜೊತೆಯಲ್ಲಿಯೇ ಇರುತ್ತಾರೆ. ಆದಕ್ಕೆ ವಿಧಿಯಿಲ್ಲ, ಪಾನ ನಿರೋಧ ಕೆಲವು ದಿವಸಗಳ ಮಟ್ಟಿಗೆ ಯಶಸ್ವಿಯಾಗಿದೆ ಎಂದು ಕಾಣಬಹುದು. ಆದರೆ ಕೊನೆಯವರೆಗೆ effective ಆಗಿ ನಡೆಯುವದಿಲ್ಲ. ಹೆಂಡ ಕುಡಿಯುವುದನ್ನು ತಪ್ಪಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಪೋಲಿಸಿನವರೂ ಸಹ ಕುಡಿಯುತ್ತಾರೆ. ಅದ್ದರಿಂದ ಯಶಸ್ವಿಯಾಗಿ ಕಾನೂನು ಜಾರಿ ಮಾಡುವುದು ಸಾಧ್ಯವಿಲ್ಲ, ಆದಕಾರಣ ಪಾನ ನಿರೋಧ ಕಾನೂನನ್ನು ತೆಗೆದುಬಿಟ್ಟು ಸರಕಾರಕ್ಕೆ ಸಲೀಸಾಗಿ ಬರತಕ್ಕ ಉತ್ಪನ್ನವನ್ನು ಕಳೆದು

(ಶ್ರೀ ಎಂ. ಲಿಂಗೇಗೌಡ)

ಕೊಳ್ಳದೆ, ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಸೂಚನೆ ಮಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ. ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಲ್).—ಸ್ವಾಮಿ, ಇವತ್ತಿನ ದಿವಸ ಮಾತನಾಡಬೇಕಾದುದು ಮದ್ಯಪಾನ ನಿರೋಧ ವಿಷಯ. ಮಹಾತ್ಮಾ ಗಾಂಧೀಜಿಯವರ ಆದೇಶದಂತೆ ಮದ್ಯಪಾನ ನಿರೋಧ ತತ್ವವನ್ನು ಜಾರಿಯಲ್ಲಿ ತರಬೇಕಾಗಿದೆ. ತತ್ವ ಚೆನ್ನಾಗಿದೆ. ಅದು ಯಶಸ್ವಿಯಾಗಿದೆ ಎಂದು ಸಹ ಹೇಳುತ್ತಾರೆ ಆದರೆ ನಿಜವಾಗಿಯು ಪ್ರಯತ್ನ ಸಫಲವಾಗಿದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಿದರೆ ಅದು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲವೆಂದು ಹೇಳಬೇಕಾಗಿದೆ. ಸರಕಾರ ಪ್ರಯತ್ನ ಮಾಡಿದ್ದಾರೆ. ಆದರೆ ಸಾರ್ವಜನಿಕರ ಸಹಕಾರವಿಲ್ಲದೆ ಪಾನ ನಿರೋಧ ಯಶಸ್ವಿಯಾಗಲಾರದು. ಇದನ್ನು ಯಶಸ್ವಿಗೊಳಿಸುವುದಕ್ಕೆ ನನ್ನ ಅಭಿಪ್ರಾಯದಲ್ಲಿ ಸರಕಾರದ ಮೇಲೆ ಹೊಣೆಗಾರಿಕೆ ಹೆಚ್ಚಾಗಿದೆ. ಮದ್ಯಪಾನ ನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಲು ನಾನು ಸಹ ಪ್ರಯತ್ನ ಪಟ್ಟಿದ್ದೇನೆ. ನನ್ನ ಅನುಭವದಿಂದ ಹೇಳುವದಾದರೆ ಕೆಲವು ದಿವಸ ಪ್ರಾರಂಭದಲ್ಲಿ ಚೆನ್ನಾಗಿ ನಡೆಯಿತು. ಪೋಲೀಸರಿಗೆ ಬಹಳ ಕಷ್ಟವಾಯಿತು, ಬರಬರುತ್ತಾ ಕಳ್ಳಭಟ್ಟಿ ಸರಾಯಿ ತಯಾರು ಮಾಡುವುದು ನಡೆಯಿತು. ಕಳ್ಳಭಟ್ಟಿ ಸರಾಯಿ ಕಂಡು ಹಿಡಿಯುವುದು ಕಷ್ಟವಾಗಿದೆ. ಯಾಕೆಂದರೆ ಅದಕ್ಕೆ ಪೋಲಿಸರು ಅನುಕೂಲವಾಗಿ ವರ್ತಿಸುತ್ತಾರೆ. ಆದ್ದರಿಂದ ಇದು ಯಶಸ್ವಿಯಾಗುವುದು ಖಂಡಿತ ಸಾಧ್ಯವಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಳಗಿನ ಕಳ್ಳನು ಕಳ್ಳತನ ಹಿಡಿಯುವದಿಲ್ಲ. ಪರಿಸ್ಥಿತಿಯು ಈ ರೀತಿಯಾಗಿರುವಾಗ್ಗೆ ಸಾರ್ವಜನಿಕರು ಒಂದು ವೇಳೆ ಸಹಕಾರ ಮಾಡಿದರೂ ಸಹ ಏನು ಮಾಡಬಲ್ಲರು. ಹಳ್ಳಿಗಳ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿ ರಾಜಕೀಯ ಪಕ್ಷಗಳು ಹೆಚ್ಚಾಗಿವೆ. ಅನೇಕರು ಸಮಾಜಕಂಟಕರಾಗಿದ್ದಾರೆ. ಅಂಥಲ್ಲಿ ಗೌರವಸ್ಥರು ಮುಂದೆ ಬರುವದಿಲ್ಲ. ಆದ್ದರಿಂದ ರೈತರಿಗೆ ವಿಪತ್ತು ಸಂಭವಿಸುತ್ತಿದೆ. ಪೋಲೀಸರ ಸಂರಕ್ಷಣೆ ಇದ್ದರೂ ಸಹ ಗೌರವಸ್ಥರು ವಿಪತ್ತಿನಲ್ಲಿ ಸಿಕ್ಕುತ್ತಾರೆ. ಆದ ಕಾರಣ ಸಾರ್ವಜನಿಕರ ಸಹಕಾರ ಹೇಗೆ ಬರುತ್ತದೆ? ಖಂಡಿತವಾಗಿ ಸಾರ್ವಜನಿಕರ ಸಹಕಾರ ದೊರೆಯುವದಿಲ್ಲ. ಸಾಮಾನ್ಯ ಜನರು ಹೆದರುತ್ತಾರೆ. ಆದ್ದರಿಂದ ಮದ್ಯಪಾನ ನಿರೋಧವು ಸರಿಯಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಸರಕಾರ ವಿಫಲವಾಗಿದೆಂದು ಬಹಳ ವಿಷಾದಿಂದ ಹೇಳಬೇಕಾಗಿದೆ. ಆದುದರಿಂದ ಇದನ್ನು ತೆಗೆದುಹಾಕಬೇಕೆಂದು ನಾನು ಹೇಳುವದಿಲ್ಲ. ಯಾಕೆಂದರೆ ಮಹಾತ್ಮಾ ಗಾಂಧಿಯವರ ಆದೇಶದಂತೆ ಕಾಂಗ್ರೆಸ್ ಸರಕಾರ ರಾಜ್ಯಭಾರ ನಡೆಸಬೇಕಾಗಿದೆ. ಅವರು ಇದನ್ನು moral issue ಎಂದು ತಿಳಿದು ಪಾನ ನಿರೋಧ ಜಾರಿಗೇ ತರಬೇಕೆಂದು ಹೇಳಿದ್ದಾರೆ. ಸಮಾಜಕ್ಕೆ ತಿಳಿಯ ಪಡಿಸಬೇಕು. ಕುಡಿಯುವುದು ಪಾಪಕರ ಕುಡಿಯಬೇಡಿ ಎಂದು ಜನ ಜಾಗ್ರುತಿ ಮಾಡಬೇಕಾಗುತ್ತದೆ. ಹೆಂಡದಿಂದ ಉತ್ಪತ್ತಿಯಾದ ಪಾಪದ ದ್ರವ್ಯವನ್ನು ತೆಗೆದು ಕೊಳ್ಳುವುದಕ್ಕೆ ಯಾರು ಒಪ್ಪಂತಕ್ಕಥಾದ್ದಲ್ಲ, ಬರೀ ಕಾನೂನು ಮಾಡುವದರಿಂದ ಪ್ರಯೋಜನವಿಲ್ಲ. ಜನ ಜಾಗ್ರುತಿಮಾಡಿ ಪ್ರಚಾರ ಮಾಡಬೇಕು ಈ ರೀತಿ ಇದನ್ನು ಯಶಸ್ವಿಯಾಗಿ ಮಾಡಬೇಕು. ತೆಗೆದು ಹಾಕಿ ಎಂದು ನಾನು ಎಂದಿಗೂ ಹೇಳುವದಿಲ್ಲ, ಆದರೆ ಯಶಸ್ವಿಯಾಗುವ ಸರಿಯಾದ ಮಾರ್ಗದಲ್ಲಿ ಪ್ರಯತ್ನ ಮಾಡಬೇಕು. ತಾಯಿ ಮಗುವಿಗೆ ವಿಷಹಾಕುವುದಕ್ಕೆ ಪ್ರಯತ್ನಮಾಡಿದರೆ ಮಗು ಹೇಗೆ ತಾನೇ ಬದುಕುವುದಕ್ಕೆ ಸಾಧ್ಯ? ಹಾಗೆಯೇ ನೀರಾ ಸೊಸೈಟಿಗಳನ್ನು ಪ್ರಾರಂಭವಾಡುವುದೂ ಆಗಿದೆ, ನಾನು ರಾಜಕೀಯ ದೃಷ್ಟಿಯಿಂದ ಇದನ್ನು ತೆಗಳುತ್ತಿಲ್ಲ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಒಂದು ಕಡೆ ಒಂದು ನೀರಾ ಸೊಸೈಟಿಗೆ ಇನ್ಸ್‌ಪೆಕ್ಟರು ಹೋಗಿ ತನಿಖೆಮಾಡಿದರೆ ಅಲ್ಲಿ ಸಿಬ್ಬಂದಿ ಖರ್ಚು ಆರು ಸಾವಿರ ಚಿಲ್ಲರೆ ಹಾಕಿದ್ದರು, ಜಮಾ ಆಗಿರುವುದು

ಎಷ್ಟು ಎಂದು ನೋಡಿದರೆ ಕೇವಲ ನಲವತ್ತು ರೂಪಾಯಿ, ನೀರಾ ಖರ್ಚಾಗದೆ ಹೆಂಡವಾಗಿ ಪರಿವರ್ತನೆಯಾದದ್ದು ಏನಾಯಿತು ಎಂದರೆ ಅದನ್ನೆಲ್ಲ ಚೆಲ್ಲಿಬಿಟ್ಟೆವು ಎಂದು ಹೇಳಿದರು. ಅದನ್ನೆಲ್ಲ ಲಕ್ಷಣವಾಗಿ ಮಾರಾಟ ಮಾಡಿದ್ದಾರೆ. ಊರು ಮುಂದಿನ ತೋಪಿನಲ್ಲಿಟ್ಟು ಪಬ್ಲಿಕ್ಕಾಗಿ ಮಾರುತ್ತಿದ್ದಾರೆ, ಮತ್ತು ಕೆಲವಾರು ಕಡೆ ಅದರ ಬ್ರಾಂಚ್ ಸಹ ತೆರೆದಿದ್ದಾರೆ. ಇಂಥದ್ದಕ್ಕೆಲ್ಲ ಸಮಾಜೋದ್ಧಾರಕರು ಎಂದು ಹೇಳಿಕೊಳ್ಳತಕ್ಕ ಜನ ಒಳಪಟ್ಟಿದ್ದರೆ ಹೇಗೆ ತಾನೇ ಪಾನ ನಿರೋಧವನ್ನು ಯಶಸ್ವಿ ಮಾಡಲು ಸಾಧ್ಯ? ಇಂಥ ಕಾರ್ಯಗಳಿಂದ ನಿಮ್ಮ ಯೋಜನೆಯಲ್ಲಿ ಯಶಸ್ವಿಯಾಗಿಲ್ಲ.

ಇನ್ನೊಂದು ಕಡೆ ಒಬ್ಬ ಮಹನೀಯರು, ರಾಜಕೀಯದಲ್ಲಿ ಗಣ್ಯಸ್ಥಾನದಲ್ಲಿರುವವರು, ಕಾಂಗ್ರೆಸ್ ಪಕ್ಷದವರು, ತಮ್ಮದೇ ತೋಪಿನಲ್ಲಿ ಹೆಂಡವಿಳಿಸುತ್ತಿದ್ದಾರೆ. ನಮಗೆ ಅನುಮತಿ ಕೊಟ್ಟಿದ್ದಾರೆ, ನಾವು ನೀರಾ ಮಾರುತ್ತೇವೆಂದು ಹೇಳುತ್ತಾರೆ. ತಮ್ಮ ಊರಿನಲ್ಲಿ ಮತ್ತು ಪಕ್ಕದ ಹಳ್ಳಿಗಳಲ್ಲಿ ಹೆಂಡವನ್ನು ಮಾರುತ್ತಾರೆ. ಪೋಲಿಸಿನವರು ಇದಕ್ಕೇನಾದರೂ ಕೈಹಾಕಿದ್ದರೆ ಬದುಕಿದ ಹಾಗೆಯೇ ಇದೆ. ಪೋಲೀಸಿನವರೂ, ಗಣ್ಯರಾದವರೂ ಒಂದುಗೂಡಿರಬೇಕಾದರೆ ಪಾನ ನಿರೋಧವು ಹೇಗೆ ತಾನೇ ಯಶಸ್ವಿಯಾಗುತ್ತದೆ? ಇದನ್ನು ಯಶಸ್ವಿಗೊಳಿಸಬೇಕೆಂಬುದು ನನ್ನ ಅಭಿಪ್ರಾಯ. ಮಾನ್ಯ ಗೃಹಸಚಿವರು ಬಹಳ ಉತ್ಸಾಹದಿಂದ ಇರುತ್ತಾರೆ. ನಿಜವಾಗಿಯೂ ಯಶಸ್ವಿಯಾಗಿ ಕಾರ್ಯಸಾಧನೆ ಮಾಡುತ್ತಾರೆ ಎನ್ನುವ ನಂಬಿಕೆ ಇದೆ.

ಸ್ವಾಮೀ, ಹಳ್ಳಿಯಲ್ಲಿ ಕೆಲವರು ಭಟ್ಟಿಸಾರಾಯಿ ತಯಾರು ಮಾಡಿ ತಾವೇ ಮನೆಯಲ್ಲಿ ಮಾರುತ್ತಾರೆ. ಕೆಲವರು ಬೇರೆ ಕಡೆ ತಯಾರು ಮಾಡಿ ತರುತ್ತಾರೆ. ಈ ವಿಚಾರ ಸುತ್ತಮುತ್ತಲಿನ ಜನರೆಲ್ಲರಿಗೂ ಗೊತ್ತು ಇರುತ್ತದೆ. ಆದರೆ ದುರ್ಮಾರ್ಗರನ್ನು ಎದುರು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ವಿಷಯ ಗೊತ್ತಿದ್ದರೂ ಯಾರೂ ಸಮಾಚಾರ ಕೊಡುವುದಿಲ್ಲ. ಅಂಥ ಕಡೆ ಜನರನ್ನು ಅವರ ಮೇಲೆ ಎತ್ತಿ ಕಟ್ಟಬೇಕು. ಇದಕ್ಕೆ ಒಂದು ಮಾರ್ಗವೆಂದರೆ ಯಾವ ಕ್ಷೇತ್ರದಲ್ಲಿ ಕಳ್ಳಭಟ್ಟಿ ತಯಾರಿಕೆ ನಡೆಯುತ್ತದೆಯೋ ಅಂಥ ಕಡೆ ಅದಕ್ಕೆ ಸಂಬಂಧಪಟ್ಟವರನ್ನು ಹಿಡಿದುಕೊಡಬೇಕು. ಇಲ್ಲದೆ ಹೋದರೆ ಪುಂಡುಗಂದಾಯವನ್ನು ಹಾಕುತ್ತೇವೆಂದು ಹೇಳಬೇಕು. ಅಲ್ಲದೆ ಕಳ್ಳಭಟ್ಟಿ ತಯಾರಕರನ್ನು ಕೋರ್ಟಿಗೆ ಕರೆದುಕೊಂಡು ಹೋದರೆ, ಐವತ್ತು ರೂಪಾಯಿ, ಅರವತ್ತು ರೂಪಾಯಿ, ನೂರು ರೂಪಾಯಿ ಹೀಗೆ ಜುಲ್ಮಾನೆ ಹಾಕುತ್ತಾರೆ. ಜುಲ್ಮಾನೆ ಹಣವನ್ನು ಅವರು ಲಕ್ಷ್ಯವಿಲ್ಲದೆ ಬಿಸಾಡುತ್ತಾರೆ. ಇವರಿಗೆಲ್ಲ ಉಗ್ರಶಿಕ್ಷೆಯನ್ನು ವಿಧಿಸಬೇಕು. ದುರ್ವ್ಯಾಪಾರ ಮಾಡಿದರೆ ಅದರಿಂದ ತೊಂದರೆಯುಂಟಾಗುತ್ತದೆನ್ನುವ ಹೆದರಿಕೆ ಆ ಕಸುಬು ಮಾಡುವವರಿಗೆ ಬರಬೇಕು. ಆ ರೀತಿ ಮಾಡಿದರೆ ನಿಜವಾಗಿಯೂ ಹೆದರಿಕೆ ಬರುತ್ತದೆ. ಇದೆಲ್ಲದರ ಜೊತೆಗೆ ಜನಗಳಿಗೆ ಸ್ವಲ್ಪ ಬೋಧೆ ಮಾಡಬೇಕು. preach ಮಾಡಬೇಕು ಎಂದು ಶ್ರೀಮಾನ್ ಕೊಥಾವಳೆಯವರು ಹೇಳಿದುದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಸರಿಯಾದ ಜನರನ್ನು ನೇಮಿಸಿ ಉತ್ತಮವಾದ ಹಿತೋಪದೇಶವನ್ನು ಮಾಡಿದರೆ ಅದರಿಂದ ಉಪಯೋಗವಾಗುತ್ತದೆನ್ನುವುದರಲ್ಲಿ ನನಗೆ ನಂಬಿಕೆಯಿದೆ. ಅಷ್ಟಕ್ಕೂ ಪಾನ ನಿರೋಧವು ಯಶಸ್ವಿಯಾಗದೆ ಹೋದರೆ ನಂತರ ದೇವರೇ ದಾರಿ ತೋರಿಸಬೇಕು.

ಇಷ್ಟೆಲ್ಲ ಹೇಳುತ್ತ ಪುನಃ ಪೋಲೀಸ್ ವಿಷಯಕ್ಕೇ ಬರುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮೊದಲು, ಆಗಿನ ಕಾಲದ ಕಾನ್ಸ್ಟೇಬಲ್‌ಗಳ ಮೇಲಧಿಕಾರಿಗಳ ಮನೆಗೆ ಹುಲ್ಲು ತರುವುದು, ಸೌದೆ ತರುವುದು, ಬಟ್ಟೆ ಒಗೆಯುವುದು, ಕೋಳಿ ಕೊಯ್ಯುವುದು, ಇತ್ಯಾದಿ ಕೆಲಸಗಳಿಗೆ ಇದ್ದರು. ಸ್ವಾತಂತ್ರ್ಯ ಬಂದು ಹದಿಮೂರು ವರ್ಷಗಳ ನಂತರವೂ ಕೂಡ ಇದೇ ರೀತಿಯಲ್ಲಿ ಕಾನ್ಸ್ಟೇಬಲ್‌ಗಳಿದ್ದಾರೆ. ಇವರ ಮಟ್ಟ ಉತ್ತಮವಾಗಬೇಕಾಗಿದೆ. ಈಗ ಕಾಲ ಮೀರಿದೆ, ನನ್ನ ಅಭಿಪ್ರಾಯದಲ್ಲಿ ಅದರ ಮಟ್ಟವೇ ಇಷ್ಟು. ಇಂಥವರನ್ನು ಇಟ್ಟುಕೊಂಡು, ಅವರನ್ನು ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ. ಅದರ ಮಟ್ಟವನ್ನು ಹೆಚ್ಚಿಸಬೇಕಾದರೆ ಕನಿಷ್ಟಪಕ್ಷ S.S.L.C. ಆಗಿರುವವರನ್ನು ಪೋಲೀಸ್ ಕಾನ್ಸ್ಟೇಬಲ್‌ಗಳಾಗಿ ನೇಮಕಮಾಡಿ ಅವರಿಗೆ ಹೆಚ್ಚಿನ ಸಂಬಳಕೊಟ್ಟು, ದಕ್ಷತೆ

(ಶ್ರೀ ಬಿ. ಎಲ್. ನಾರಾಯಣ ಸ್ವಾಮಿ)

ಯಿಂದ ದುಡಿಯುವಂತೆ ಮಾಡಿ ಅವರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಜನರೆಲ್ಲರೂ ಒಳ್ಳೆಯವರಾದರೆ, ಪೋಲೀಸಿನವರ ಆವಶ್ಯಕತೆಯೇ ಇರುವುದಿಲ್ಲ. ಎಲ್ಲರೂ ದೇವರುಗಳೇ ಆದರೆ, ಧರ್ಮಾತ್ಮರೇ ಆದರೆ, ದೇವರು ಭೂಮಿಯಲ್ಲಿ ಏಕೆ ಅವತಾರ ಮಾಡಬೇಕಾಗಿತ್ತು. ರಾಕ್ಷಸರು ಆಗಲೂ ಇದ್ದರು, ಈಗಲೂ ಇದ್ದಾರೆ. ಆದ್ದರಿಂದ ಜನರ ಸಂರಕ್ಷಣೆಗೆ ಪೋಲೀಸರು ಬೇಕು. ಎಲ್ಲರೂ ಸತ್ಯ ಹರಿಶ್ಚಂದ್ರರೇ ಆದರೆ ಪೋಲೀಸಿನವರು ಏಕೆ ಬೇಕು? ನಮ್ಮ ದೇಶ ರಾಮರಾಜ್ಯವಾಗುತ್ತಿತ್ತು. ಆಗ ಪೋಲೀಸಿನವರಾಗಲೀ, ಮಾನ್ಯ ಚೆನ್ನಬಸಪ್ಪನವರು ಗೃಹ ಮಂತ್ರಿಗಳಾಗಿ ಆಗಲೀ ಇರಬೇಕಾಗುತ್ತಿರಲಿಲ್ಲ. ರಾಕ್ಷಸೀಕೃತ್ಯ ನಡೆಸುವವರು, ದುಷ್ಟರು ಈಗಲೂ ಇಧ್ದಾರೆ. ಅದ್ದರಿಂದ ದುರ್ಮಾರ್ಗಿಗಳನ್ನು ಶಿಕ್ಷಿಸಿ ಸನ್ಮಾರ್ಗ ಪ್ರವರ್ತಕರಿಗೆ ರಕ್ಷಣೆ ಕೊಡತಕ್ಕ ಪೋಲೀಸಿನವರು ಉನ್ನತ ಮಟ್ಟದವರಾಗಬೇಕು. ಅದಕ್ಕಾಗಿ ನಮ್ಮ ಪೋಲೀಸ್ ಬಾಬಿನಲ್ಲಿ ಹೆಚ್ಚು ಖರ್ಚಾದರೂ ಚಿಂತೆಯಿಲ್ಲ. ಪೋಲೀಸರು ಕಾನ್‌ಸ್ಟೇಬಲ್‌ಗಳಾಗಿ S. S. L. C. ಗಿಂತ ಕಡಮೆ ಅರ್ಹತೆಯುಳ್ಳವರಿರಬಾರದು, ಅವರನ್ನು ಹೆಚ್ಚಿಗೆ ಮಟ್ಟದಲ್ಲಿಡಬೇಕು.

ಈಗಿನ ಪರಿಸ್ಥಿತಿಯಲ್ಲಿ ಪೋಲೀಸ್ ರೈಟರುಗಳೆಂದು ಇಟ್ಟುಕೊಂಡಿದ್ದಾರೆ, ಪೋಲೀಸ್ ಕಾನ್‌ಸ್ಟೇಬಲ್‌ಗಳಲ್ಲಿ ಕನ್ನಡ ಬರೆಯುವುದನ್ನು ಬಲ್ಲವರಿದ್ದರೆ ಪೋಲೀಸ್ ರೈಟರ್ ಎಂದು ಆಫೀಸಿನಲ್ಲಿ ಗುಮಾಸ್ತೆ ಕೆಲಸಕ್ಕೆ ಹಾಕಿಕೊಳ್ಳುತ್ತಾರೆ. ಇನ್‌ಸ್ಪೆಕ್ಟರ್ ಮತ್ತು ಸಬ್ ಇನ್‌ಸ್ಪೆಕ್ಟರಿಗೆ ಗುಮಾಸ್ತರನ್ನು ಕೊಟ್ಟಿಲ್ಲ, ಇದು ಬಹಳ ತಪ್ಪು. ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿರಬೇಕಾದರೆ ಪೋಲೀಸ್ ಕ್ಲಾರ್ಕ್ ಎಂದು ಪ್ರತ್ಯೇಕ ಹುದ್ದೆಯನ್ನು ನಿರ್ಮಿಸಿ ಸಾಕಷ್ಟು ಉತ್ತೇಜನವನ್ನು ಕೊಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲದೆ ಇಲ್ಲ. ದಯವಿಟ್ಟು ಇದನ್ನು ಮಾಡಿಕೊಡಿ ಎಂದು ಹೇಳುತ್ತೇನೆ.

ಮೋಟಾರು ವಾಹನಗಳು ಹೊರಡುವ ಕಾಲ ಮತ್ತು ಅದರಲ್ಲಿ ತುಂಬತಕ್ಕ ಪ್ರಯಾಣಿಕರ ಸಂಖ್ಯೆ, ಈ ವಿಚಾರಗಳಲ್ಲಿ ನೆರೆ ರಾಷ್ಟ್ರಗಳಲ್ಲಿರುವ ಮಟ್ಟಕ್ಕೆ ನಾವೂ ಕೂಡ ಬರುತ್ತೇವೆಂದು ಆಸೆ ಪಡುತ್ತೇನೆ. ಮದ್ರಾಸ್ ಮತ್ತು ಆಂಧ್ರ ಪ್ರಾಂತಗಳಲ್ಲಿ ಯಾವ ಒಂದು ಬಸ್ ಆಗಲಿ, ಓವರ್‌ಲೋಡ್ ಇಲ್ಲದೆ ಕ್ಲುಪ್ತವಾದ ಕಾಲಕ್ಕೆ ಲೋಡ್ ಇರಲಿ. ಇಲ್ಲದೆ ಹೋಗಲಿ, ಹೊರಡುತ್ತಾರೆ. ಪೋಲೀಸಿನವರು ನಿನ್ನ ವೇಳೆ ಆಯಿತು, ನೀನು ಹೊರಡು ಎಂದು ಹೇಳುವ ಮಾತೇ ಇಲ್ಲ, ನಮ್ಮ ದೇಶದಲ್ಲಿಯೂ ಆ ಮಟ್ಟಕ್ಕೆ ಬರಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರು ಇದನ್ನು ಗಮನಕ್ಕೆ ತೆಗೆದುಕೊಂಡು ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುತ್ತಾರೆಂದು ನಾನು ನಂಬಿಕೊಂಡಿದ್ದೇನೆ.

ಆಫೀಸರ್ಸ್ ವಿಚಾರ ಮತ್ತು ಆಫೀಸಿನಲ್ಲಿರತಕ್ಕ ಕೆಲಸದ ವಿಚಾರದಲ್ಲಿ ಈಗಾಗಲೇ ಮಾನ್ಯ ಮಿತ್ರರು ಕೂಲಂಕಷವಾಗಿ ಹೇಳಿದ್ದಾರೆ. ಒಟ್ಟಿನಲ್ಲಿ ಸಾರ್ವಜನಿಕರು, ಪ್ರಜಾಪ್ರಭುತ್ವದಲ್ಲಿ ಎಷ್ಟನ್ನು ನಿರೀಕ್ಷಿಸಬಹುದಾಗಿತ್ತೋ ಅಷ್ಟು ಪ್ರಾಪ್ತವಾಗಿಲ್ಲ. ಎಲ್ಲ ವಿಷಯಗಳಿಗೂ ಮಾನ್ಯ ಮಂತ್ರಿಗಳು ಗಮನಕೊಟ್ಟು ಅದನ್ನು ಸರಿಪಡಿಸುತ್ತಾರೆಂದು ನಾನು ನಂಬಿದ್ದೇನೆ.

†ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, ಪೋಲೀಸ್ ವಿಷಯದಲ್ಲಿ ಈಗ ನಮ್ಮ ಮುಂದೆ ಇಟ್ಟಿರತಕ್ಕ 4,05,30,600 ರೂಪಾಯಿಗಳ ಬೇಡಿಕೆ ಕಡಿಮೆಯಿದೆ ಎನ್ನುವವರ ಪೈಕಿ ನಾನು ಒಬ್ಬ. ಏಕೆಂದರೆ 365 ದಿವಸವೂ ಹಗಲು-ರಾತ್ರಿ ಕೂಡಿ ಕಾರ್ಯಮಾಡುವ ಇಲಾಖೆ ಎಂದರೆ ಪೋಲೀಸ್ ಇಲಾಖೆ. ಹೆಚ್ಚು ದುಡ್ಡು ಕೊಡಿರಿ, ಹೆಚ್ಚು ಪಗಾರ ಕೊಡಿರಿ, ಆಮೇಲೆ ಅವರಿಂದ ಹೆಚ್ಚಾದ ಕೆಲಸವನ್ನು ತೆಗೆದುಕೊಳ್ಳಿರಿ. ಪೋಲೀಸರ ವಿಷಯದಲ್ಲಿ ಕೆಲವು ಟೀಕೆಗಳನ್ನು ನಾನು ಮಾಡುತ್ತಿದ್ದೇನೆ. ಯೋಗ್ಯವಾದುದಕ್ಕೆ ನಾನು ಅಭಿಮಾನ ಪಟ್ಟುಕೊಳ್ಳುತ್ತೇನೆ. ಕೆಲವು ಸಂದರ್ಭಗಳಲ್ಲಿ ಯೋಗ್ಯ ರೀತಿಯಲ್ಲಿ ಚಲೋ ಕಾರ್ಯವನ್ನು ಪೋಲೀಸರು ಮಾಡಿದ್ದರೆ, ಅಂಥವರಿಗೆ ರಾಷ್ಟ್ರಪದಕದ ಬಹುಮಾನ, ರಾಜ್ಯದ ಮಟ್ಟಿಗೆ ಬಹುಮಾನ ಕೊಡಿರಿ, ಬೇಡವೆನ್ನುವುದಿಲ್ಲ. ಕೆಲ ಕೆಲವು ಸಂದರ್ಭಗಳಲ್ಲಿ ಅತಿ ಕೆಳಮಟ್ಟದ ರೀತಿಯಿಂದ ಹೋಗುತ್ತಿರು

ತ್ತಾರೆ. ಅಂಥ ಸಂದರ್ಭಗಳಲ್ಲಿ ಮಾತ್ರ ತಾವು ಅವರ ಮೇಲೆ ಕೃಪೆ ತೆಗೆದುಕೊಳ್ಳಬೇಕು. ನನಗೆ ಒಂದು ರೀತಿಯ ಅಭಿಮಾನವಿದೆ, ಏಕೆಂದರೆ ಯಾವುದಾದರೂ ಲೋಪ ದೋಷಗಳಿರುವುದನ್ನು ನನ್ನ ಗಮನಕ್ಕೆ ತಂದರೆ ಅದನ್ನು ನಿವಾರಿಸಲಿಕ್ಕೆ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳತಕ್ಕ ಮಾನ್ಯ ಚೆನ್ನಬಸಪ್ಪನವರು ಈಗ ಗೃಹಶಾಖೆಯ ಮಂತ್ರಿಗಳಾಗಿದ್ದಾರೆ. ಅದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೇನೆ. ಆದರೆ ಅವರಿಗೆ ಬರೀ ಮಾತಿನಿಂದ ನಮಗೆ ಸಮಾಧಾನವಾಗುವುದಿಲ್ಲ. ಅದನ್ನು ಪರೀಕ್ಷೆ ಮಾಡಬೇಕಾಗಿದೆ, ಅವರಿಗೆ ಇನ್ನೂ ಒಂದು ವರ್ಷಕಾಲ ಅವಧಿಯಿದೆ.

ಪೋಲೀಸರಿಗೆ ಕೊಡತಕ್ಕ ಸಂಬಳ ಸುಮಾರು 70 ರೂಪಾಯಿ. ಹತ್ತಾರು ವರ್ಷ ಬಡ್ತಿಯನ್ನು ಹೊಂದಿ 80ಕ್ಕೆ ಬರಬೇಕಾದರೆ ರಗಳೆಯಾಯಿತು. ಮನೆಯಲ್ಲಿ ನಾಲ್ಕು ಜನ ಮಕ್ಕಳಿದ್ದು ತಾನೂ, ತನ್ನ ಹೆಂಡತಿ, ಇಷ್ಟು ಜನಕ್ಕೆ ಜೀವನಕ್ಕೆ ಹಣ ಬೇಡವೇ, ಮಕ್ಕಳ ವಿದ್ಯಾಭ್ಯಾಸಕ್ಕೆ ಏನೂ ಬೇಡವೇ ! ಒಬ್ಬ ಪೋಲೀಸಿನವನಿಗೆ 80 ರೂಪಾಯಿ ಕೊಟ್ಟರೆ ಅವನ ಮನೆಯ ಸಂಸಾರ ನಡೆಸಿಕೊಂಡು ಹೋಗುವುದಕ್ಕೆ ಶಕ್ಯವಿದೆಯೇ ಎಂದು ಯೋಚನೆಮಾಡಿ, ಆಗ ಅವನು ಇನ್ನೊಂದು ಕಾರ್ಯ ಹಿಡಿಯಲಿಕ್ಕೆ ಪ್ರಯತ್ನಮಾಡುತ್ತಾನೆ. ಮಾನ್ಯ ಸದಸ್ಯರೊಬ್ಬರು ಈಗಾಗಲೇ ಹೇಳಿದುದನ್ನೇ ನಾನು ಹೇಳುತ್ತೇನೆ. ಜವಾನರು, ಪೋಲೀಸರು, ಸಿಪಾಯಿಗಳು, ಶಾಲಾ ಮಾಸ್ತರು, ಇಂಥವರಿಗೆ ನೂರು ರೂಪಾಯಿಗಿಂತ ಕಡಮೆ ಸಂಬಳ ಬರಬಾರದು ಎನ್ನುವವರ ಪೈಕಿ ನಾನೂ ಒಬ್ಬ. ಹೊಟ್ಟೆತುಂಬ ಪಗಾರ ಕೊಟ್ಟರೆ, ಒಳ್ಳೆಯದು. ಹಾಗೆ ಕೊಡದೆಯಿದ್ದರೆ ಲಂಚಕ್ಕೆ ಕೈಯೊಡ್ಡುತ್ತಾನೆ. ಅದಕ್ಕೆ ಹೆಚ್ಚು ಅವಕಾಶವಿರುವುದು ಪೋಲೀಸ್ ಇಲಾಖೆ. ಯಾರಾದರೂ ತಪ್ಪುಮಾಡಿದರೆ ದುಡ್ಡುಕೊಟ್ಟು ಉಳಿದುಕೊಳ್ಳಬೇಕು ಎಂದು ಪ್ರಯತ್ನಿಸುತ್ತಾರೆ. ಕಳ್ಳತನ, ಮತ್ತೊಂದು ಮಾಡಿರುತ್ತಾರೆ ಅಂಥವರು ಹತ್ತು ರೂಪಾಯಿ ತೆಗೆದುಕೊಂಡು ನನ್ನನ್ನು ಬಿಡು ಎನ್ನತಕ್ಕ ಪ್ರಸಂಗವಿರುತ್ತದೆ. ಕೆಲವು ಕಡೆಗಳಲ್ಲಿ ಮಾತ್ರ ಹೀಗಾಗಿರುತ್ತದೆ. ಹೊಟ್ಟೆತುಂಬ ಆಗುವಷ್ಟು ಪಗಾರ ಕೊಟ್ಟರೆ, ಆ ರೀತಿ ಆಗಲು ಶಕ್ಯವಿಲ್ಲ.

ಪೋಲೀಸರಿಗೆ ಖಾದಿ ಕೊಡುತ್ತಾರೆಂದು ಕೇಳಿದ್ದೇನೆ. ಎಷ್ಟೋ ಜನರಿಗೆ ಖಾದಿಯ ಮೇಲೆ ಅಪಾರವಾದ ಅಭಿಮಾನವಿದೆ. ಕಾವಿ, ಖಾದಿ ಮತ್ತು ಖಾಕಿ ಇವು ಎಷ್ಟು ಪವಿತ್ರವಾದುವೋ ಅಷ್ಟೇ dangerous, ಅಷ್ಟೇ ದಾರುಣವಾದವೂ ಆಗಿವೆ. ಅವನ್ನು ಹಾಕಿಕೊಂಡ ನಂತರ ಉತ್ತಮ ಕೆಲಸವನ್ನು ಮಾಡಬಲ್ಲರು, ಚೆನ್ನಾಗಿರುವಂತಹ ಕೆಲಸವನ್ನು ಮಾಡಬಲ್ಲರು. ಖಾಕೀ ಬಟ್ಟೆಯನ್ನು ಹಾಕಿಕೊಂಡ ಮಾತ್ರಕ್ಕೇ ಕುಡಿಯುವುದನ್ನು ಬಿಟ್ಟು ಬಿಡುತ್ತಾರೆ ಎಂದು ಹೇಳಲಿಕ್ಕೆ ಶಕ್ಯವಿಲ್ಲ. ನಾನು ಎಲ್ಲರು ಕುಡಿಯುತ್ತಾರೆ ಎಂದು ಹೇಳಲಿಕ್ಕೆ ಹೋಗುವುದಿಲ್ಲ ಕೆಲವರು ಒಳ್ಳೆಯವರು ಚಲೋ ಇದವರು ಇರುತ್ತಾರೆ. ಕೆಲವರು ಚೆನ್ನಾಗಿರುವುದಿಲ್ಲ ಮತ್ತು ಅಂತಹವರನ್ನು condemn ಮಾಡಬೇಕು ಎಂದು ಹೇಳುತ್ತೇನೆ. ಮೊನ್ನೆ ದಿನ ನಾನು ಮಾತನಾಡುವಾಗ ಮಾನ್ಯ ಅಬ್ಕಾರಿ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಪೋಲಿಸರ ಬಗ್ಗೆ ಹೀಗೇಕೆ ಹೇಳುತ್ತೀರಿ ಎಂದಾಗ ನಾನು ಪೋಲಿಸಿನವರು ಚೆನ್ನಾಗಿ ಕೆಲಸ ಮಾಡುವವರನ್ನು ಚೆನ್ನಾಗಿ ಕೆಲಸ ಮಾಡುತ್ತಾರೆ, ಚಲೋವಾಗಿ ಕೆಲಸ ಮಾಡುತ್ತಾರೆ ಎಂದು ಹೇಳುತ್ತೇನೆ. ಅಂತಹವರ ಬಗ್ಗೆ ನನಗೆ ಅಭಿಮಾನ ಇದೆ. ಆದರೆ ಕೆಡಕನ್ನು ಮಾಡುವಂತಹವರ ವಿಷಯದಲ್ಲಿ ನಾನು ಅಷ್ಟೇ ಗಂಭೀರವಾಗಿ ಹೇಳುವುದನ್ನು ತಾವು ನೋಡಿಕೊಂಡರೆ ಬಹಳ ಸಂತೋಷ. ಆರೀತಿ ನೀವು ನಂಬಬೇಕು.

ಪಾನ ಪ್ರತಿಬಂಧದ ವಿಷಯದಲ್ಲಿ ಇಲ್ಲಿ ಕೆಲಸ ಇಟ್ಟುಕೊಳ್ಳಬೇಕೆಂದು ತಿಳಿಸಿದರು, ಇನ್ನು ಕೆಲವರು ಇಟ್ಟು ಕೊಳ್ಳಬೇಡಿ ಎಂದು ತಿಳಿಸಿದರು. ಆದರೆ ತಾವಿಲ್ಲಿ ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಸುರಾಪಾನ ಎನ್ನುವುದು ದೇವತೆಗಳ ಕಾಲದಿಂದಲೂ ಬಂದಂತಾದ್ದು. ಅಂತಹವರಿಂದ ಬಂದದ್ದು ಈಗ ಏಕೆ ಬೇಡ ಎಂದು ಹೇಳುತ್ತೀರಿ? ನಮ್ಮ ಕಾಂಗ್ರೆಸ್ಸಿನವರ ಮಂತ್ರಿಮಂಡಲ. ಮಹಾತ್ಮಾ ಗಾಂಧಿಯವರ ಅನುಯಾಯಿಗಳಾಗಿ ನಾವು

(ಶ್ರೀ ಟಿ. ಕೆ. ಸಾಗೂರ್)

ಅವರು ಹೇಳಿದಂತೆ ಈ ಪಾನ ಪ್ರತಿಬಂಧವನ್ನು ಮಾಡಲೇಬೇಕು ಎಂದು ದೊಡ್ಡ ದೊಡ್ಡ ಶಬ್ದಗಳಿಂದ ಎಲ್ಲ ಕಡೆಯಲ್ಲಿಯೂ ಭಾಷಣ ಮಾಡುತ್ತಿದ್ದೀರಿ. ನೀವು ಈ ರೀತಿ ಕಾನೂನು ಮಾಡಿಬಿಟ್ಟರೆ ಪಾನ ಪ್ರತಿಬಂಧಕ ಎನ್ನುವುದು ಯಶಸ್ವಿಯಾಗುವುದಿಲ್ಲ. ನಿಮ್ಮ ಹೇಳಿಕೆಯಲ್ಲಿ ಈ ರೀತಿಯಾದ ದೊಡ್ಡ ಅಕ್ಷರಗಳಿಂದ ಹೇಳುತ್ತಾ ನಾವು ಮಾಡಿಯೇ ಮಾಡುತ್ತೇವೆಂದು ಹೇಳಿದರೆ ಅದು ಯಶಸ್ವಿಯಾಗುವುದಿಲ್ಲ. ನಾನು ಕೂಡ ಈ ಪಾನ ಪ್ರತಿಬಂಧಕವನ್ನು ತೆಗೆಯಲೇ ಬೇಕು ಎನ್ನುವವರ ಪೈಕಿ ನಾನು ಒಬ್ಬ. ಆದರೆ ಈ ರೀತಿಯಾದ ಕಟ್ಟಳೆಗಳಿಂದ ಮತ್ತು ಕಾನೂನಿನಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನೂ ಈ ಮೈಸೂರು ದೇಶದ ಕೆಲವು ಭಾಗಗಳಲ್ಲಿ ಸುತ್ತಿಕೊಂಡು ಬಂದು ನೋಡಿದ್ದೇನೆ. ಬೇಕಾದರೆ ನಮ್ಮ ಮಂತ್ರಿಗಳು ನನ್ನ ಜೊತೆಯಲ್ಲಿ ಬರಬೇಕೆಂದು ನಾನು ಆಹ್ವಾನ ಕೊಡುತ್ತೇನೆ. ಅವರು ಬಂದರೆ ಯಾವ ಯಾವ ಸನ್ನಿವೇಶಗಳಲ್ಲಿ ಕಳ್ಳಬಟ್ಟಿ ಸಾರಾಯಿನಿಂದ ಜನ ಕುಡಿಯುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದನ್ನೆಲ್ಲಾ ನೋಡಿದರೆ ಈ ಪ್ರೊಹಿಬಿಷನ್ನನ್ನು ಯಾವ ಬ್ರಹ್ಮ ಬಂದರೂ ತಪ್ಪಿಸುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳಬೇಕಾಗಿದೆ. ಉದಾಹರಣೆಯಾಗಿ ಒಂದು ವಿಚಾರ ತಮ್ಮಲ್ಲಿ ತಿಳಿಸುತ್ತೇನೆ. ನಮ್ಮ ಏರಿಯಾದಲ್ಲಿ ಒಂದು ಕಡೆ ಪೋಲೀಸು ಸ್ಟೇಷನ್ನಿಗೆ ಸಮೀಪದಲ್ಲಿ ಜನ ಒಂದು ಡ್ರಂನ್ನು ಇಟ್ಟಿದಾರೆ. ಅದನ್ನು ಒಂದು ಸುತ್ತು ತಿರುಗಿಸಿದರೆ ಬರೀ ನೀರು ಬರುಬರುತ್ತದೆ. ಎರಡು ಸುತ್ತು ಅದನ್ನೇ ತಿರುಗಿಸಿದರೆ ಅದರಲ್ಲಿ ಕಾಂಗ್ರೆಸ್ಸು ಬರುತ್ತದೆ. ಹೀಗೆ ಅಲ್ಲಿ ಬಂದವರಿಗೆ ತೋರಿಸುವಾಗ ಅಲ್ಲಿ ಏನಿದೆ ಎನ್ನುವುದೇ ಗೊತ್ತಾಗುವುದಿಲ್ಲ ಅಂತಹವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಕಾಂಗ್ರೆಸ್ ಎಂದರೆ ಕಳ್ಳಬಟ್ಟಿದಾರು ಎಂದು ಕಾರಣ ಇಷ್ಟೇ. ಮಾನವನ ನೈತಿಕ ಮಟ್ಟವನ್ನು ಉತ್ತಮಪಡಿಸಿ ಈ ರೀತಿಯಾಗಿ ಕುಡಿಯಬಾರದು ಎಂದು ಹೇಳಿ ಅವರನ್ನು ಒಪ್ಪಿಸಿ ಈ ಪಾನ ಪ್ರತಿಬಂಧವಕನ್ನು ಮಾಡಿದರೆ ಇದು ಜಯಪ್ರದವಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ ಏಕೆಂದರೆ ಕುಡಿಯುವವನು ಕುಡಿದೇ ಕುಡಿಯುತ್ತಾನೆ. ಕುಡಿಯುವವರನ್ನು ಹಿಡಿಯುವುದಕ್ಕೆ ಹೊಗುವವರು ಯಾರು? ಕುಡಿಯುವವರನ್ನು ಹಿಡಿಯುವುದಕ್ಕೆ ಹೋಗುವವರು ಕುಡಿಯುತ್ತಾರೆ. ಹೀಗೆ ಕುಡಿಯುವವನನ್ನು ನೋಡುವುದಕ್ಕೆ ಹೋಗುವವರು. ಅವರೂ ಕುಡಿಯುತ್ತಾರೆ. ಕುಡಿಯುವವರು, ಕುಡಿಯುವವರನ್ನು ಹಿಡಿಯಲಿಕ್ಕೆ ಹೊದವರು, ಮತ್ತು ಎಷ್ಟು ಕುಡಿಯುತ್ತಾರೆ ಎನ್ನುವುದನ್ನು ನೋಡಲಿಕ್ಕೆ ಹೋದವರು ಎಲ್ಲರೂ ಕುಡಿಯುತ್ತಾರೆ. ಹೀಗಿರುವುದರಿಂದ ಯಾರೂ ಕುಡಿಯುವುದಿಲ್ಲ ಏನ್ನುವುದನ್ನು ಹೇಳಲಿಕ್ಕೆ ಕಷ್ಟ. ಇದು ಅವರವರ ಮನಸ್ಸಿನ ಮೇಲೆ ಪರಿಣಾಮ ಮಾಡಿ ಅವರು ಕುಡಿಯಬಾರದು ಎಂದು ಮಾಡಿಕೊಂಡರೆ ಆಗ ಈ ಪ್ರಾಹಿಬಿಷನ್ ಎನ್ನುವುದು ಜಯಪ್ರದವಾಗುತ್ತದೆಯೇ ವಿನಾ ಬರೀ ಕಾಯಿದೆ ಮತ್ತು ಲಾಗಳನ್ನು ಮಾಡುವುದರಿಂದ ಆಗಲಿಕ್ಕೆ ಸಾಧ್ಯವಿಲ್ಲ.

ಈ ಕಾನೂನು ಬರೀ ಪುಸ್ತಕದಲ್ಲಿಟ್ಟು 1,2,3, ಹೀಗೆ ಸಾವಿರಗಟ್ಟಳೆ ಇಡುವ ಕಾನೂನಿನಂತೆ ಆಗುತ್ತದೆಯೇ ಹೋರತು ಮತ್ತೇನೂ ಆಗಲಿಕ್ಕಿಲ್ಲ ಒಂದು ಮಾತನ್ನು ಇಲ್ಲಿ ತಿಳಿಸಬೇಕಾಗಿದೆ. ಮೈಸೂರ ವಿಷಯದಲ್ಲಿ ನನಗೆ ಬಹಳ ಗೌರವವಿದೆ. ಇದು ಮಾದರಿಯ ಮೈಸೂರು. ಮೈಸೂರು ಅರಸರ ಮನತನದ ಬಗ್ಗೆ ಇತರರೂ ಎಷ್ಟು ಗೌರವ ಮತ್ತು ಮರ್ಯಾದೆಗಳನ್ನು ಇಟ್ಟುಕೊಂಡಿರುವವರ ಪೈಕಿ ನಾನೂ ಒಬ್ಬ. ಇಡೀ ಹಿಂದೂಸ್ತಾನದಲ್ಲೇ ಎಂದರೆ ಸ್ವತಂತ್ರ ಭಾರತದಲ್ಲಿರುವ ಮೈಸೂರಿನಲ್ಲಿ ಆಗತಕ್ಕ ದಸರಾ ಉತ್ಸವದಂತಹ ಬೇರೆ ಉತ್ಸವ ಎಲ್ಲಿಯೂ ಇಲ್ಲ. ಇಂತಹ ಉತ್ಸವವನ್ನು ನೋಡಲು ಪರದೇಶಗಳಿಂದ ಎಂದರೆ ಇಂಗ್ಲೆಂಡು, ಅಮೆರಿಕಾ, ರಷ್ಯಾ ಇಂತರ ದೇಶಗಳಿಂದ ಜನ ಮೈಸೂರಿಗೆ ಬಂದು ಇದನ್ನು ನೋಡಲು ಬರುತ್ತಾರೆ. ಇದು ಒಂದು ದೊಡ್ಡ ಹಬ್ಬ ಮೈಸೂರಿಗೆ ಮತ್ತು ಇದು ಕನ್ನಡನಾಡಿಗೆ ಹೆಮ್ಮೆ ತರುವಂತಹ ಹಬ್ಬ.

ಇಂತಹದರಲ್ಲಿ ಮೊನ್ನೆ ದಿನ ನಮ್ಮ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮೈಸೂರಿನಲ್ಲಿ ಈ ಪ್ರೊಹಿಬಿಷನ್ನನ್ನು ಜಾರಿ ಮಾಡಲು ತಂದಿದ್ದೇವೆ ಎಂದು ಮಾಡಿಬಿಟ್ಟರು. ಇಲ್ಲಿ ಜಗತ್ಪ್ರಸಿದ್ಧವಾದ ಅಜರಾಮರವಾದಂತಹ ಇನ್ನೂ ನೂರರೊಂದನೆಯ ವರ್ಷದಲ್ಲಿ ಕಾಲಿಡುತ್ತಿರುವ ಮಾನ್ಯ ಶ್ರೀ. ವಿಶ್ವೇಶ್ವರಯ್ಯನವರು ಕಟ್ಟಿಸಿದ ಬೃಂದಾವನದಲ್ಲಿ ಈಗ ಪ್ರೊಹಿಬಿಷನ್ನು ಎನ್ನುವುದನ್ನು ತಂದರೆ ಮುಂದಕ್ಕೆ ಬೃಂದಾವನ ಎನ್ನುವುದು ಬರಿ ವನವಾಗಿ ಹೋಗುತ್ತದೆ. ಈ ಬೃಂದಾವನವನ್ನು ನೋಡಬೇಕೆಂದೇ ಎಷ್ಟೋ ಜನ ಪರದೇಶಗಳಿಂದ ಇಲ್ಲಿಗೆ ಬರುತ್ತಾರೆ. ಇಲ್ಲಿ ಕಾಲನಿಯಮವಿಲ್ಲದೇ ಇರುವಂತಹ ಒಂದು ಅಂದವಾದ ಹೋಟಲನ್ನು ಕಟ್ಟಿಸಿದ್ದಾರೆ. ಇದರಿಂದ ಎಷ್ಟೋ ಜನ ಅಲ್ಲಿ ಇಳಿದುಕೊಳ್ಳಲು ಬರುತ್ತಾರೆ. ಇಂತಹ ಹೋಟಲುಗಳು ಇನ್ನು ಮುಂದೆ ಪಾನ ಪ್ರತಿಬಂಧಕವನ್ನು ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಕರ್ಣಾಟಕದಲ್ಲೇ ಮೈಸೂರಿಗೆ ಒಂದು ಪ್ರಾಶಸ್ತ್ಯವಿದೆ. ಇಂತಹ ಮೈಸೂರಿನಲ್ಲಿ ಇವನ್ನೆಲ್ಲಾ ಏಕೆ ಮಾಡುತ್ತಿದ್ದಾರೆ ಎನ್ನುವುದು ಶ್ರೀಮಾನ್ ಬಸವಲಿಂಗಪ್ಪನವರಿಗೂ ಚನ್ನಾಗಿ ಗೊತ್ತು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಟೂರಿಸ್ಟನ್ನು ಜಯಪ್ರದ ಮಾಡುತ್ತೇವೆಂದು ಇಲ್ಲಿ ಜಾರಿಗೆ ತರುತ್ತೇವೆಂದು ಹೇಳುತ್ತಾರೆ.

ಇವರು ಹೇಳುವ ರೀತಿಯಲ್ಲಿ ನೋಡಿದರೆ ಮೈಸೂರು ಸಿಟಿಯನ್ನು ಇನ್ನೂ ಕೆಳದರ್ಜೆಗೆ ಇಳಿಸಿಬಿಡಬೇಕೆಂಬ ಉದ್ದೇಶ ಎದ್ದು ಕಾಣುತ್ತಿದೆ. ಮೈಸೂರು ಸಿಟಿಗೆ ಇದ್ದಂತಹ ಪ್ರಾಶಸ್ತ್ಯವನ್ನು ಮತ್ತು ಗೌರವವನ್ನು ಕಡಿಮೆ ಮಾಡಲಾಗುತ್ತಿದೆ. ಈ ಸಿಟಿಗೆ ಪ್ರೋತ್ಸಾಹ ಕೊಡದೇ ಹೀಗೇಕೆ ಮಾಡುತ್ತಾರೆ ?

Sri J. B. MALLARADHYA.—You are attracting tourists to Mysore City but in every way you are trying to minimise the importance of Mysore. This is a very important point in regard to the enforcement of prohibition in Mysore City.

ಶ್ರೀ ಬಿ. ಕೆ. ನಾಗೂರು.—ಸ್ವಾಮೀ ಹೋದಸಾರಿ ಅಬ್ಕಾರಿ ಮಂತ್ರಿಗಳಾಗಿದ್ದ ಶ್ರೀಮಾನ್ ರಾಚಯ್ಯನವರು ನಮ್ಮ ದೇಶದಲ್ಲಿದ್ದ ಬೀದರು ಜಿಲ್ಲೆಯಲ್ಲಿ ಮೊದಲು ಪಾನ ಪ್ರತಿಬಂಧಕವನ್ನು ಜಾರಿ ಮಾಡಬೇಕೆಂದು ಬಿಲ್ಲನ್ನು ಇಂಟ್ರಡ್ಯೂಸು ಮಾಡಿದರು. ಆದರೆ ಈಗ್ಗೆ ಕೆಲವೇದಿನಗಳ ಹಿಂದೆ ಅಬ್ಕಾರಿ ಮಂತ್ರಿಗಳಾಗಿ ಬಂದಿರುವವರು ಹೈದರಾಬಾದಿನ ಭಾಗದಿಂದ ಬಂದವರು ಎಂತಲೋ ಏನೋ ಅವರು ಈಗ ಬಂದು ಮೈಸೂರಿಗೆ ಎಂದು ಇಟ್ಟುಕೊಂಡು ಬಂದು ಇಲ್ಲಿ ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಇದರಲ್ಲಿ ಏನೋ ಒಂದು ರೀತಿಯಾದ Understanding ನಿಂದ ಇದನ್ನು ಗಡಪ್ ಮಾಡುವ ಸನ್ನಿವೇಶವಿದೆ ಎಂದು ನನಗೆ ತೋರುತ್ತದೆ. ಮೈಸೂರಿನಲ್ಲಿ ಏಕೆ ಮಾಡಬಾರದು ಎಂದು ಇವರೀಗ ಹೇಳಲಿಕ್ಕೆ ಹೊರಟಿದ್ದಾರೆ. ಈ ಕನ್ನಡ ನಾಡಿನಲ್ಲಿರುವ ಸುಮಾರು 19 ಜಿಲ್ಲೆಗಳಲ್ಲಿ ನಾನೂ ಕೂಡ ಅಡ್ಡಾಡಿ ಎಲ್ಲ ಕಡೆಗಳಲ್ಲಿಯೂ ತಿರುಗಿ ಬಂದಿದ್ದೇನೆ. ಮೈಸೂರು ಜಿಲ್ಲೆಯ ಕೆಲವು ಭಾಗದಲ್ಲಿ ಲಂಬಾಣಿಗಳು ಎನ್ನುವಂತಹ ಜನರಿದ್ದಾರೆ ಎನ್ನುವದು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರಿಗೂ ಗೊತ್ತು. ಇವರು ಕಳ್ಳಬಟ್ಟಿ ತಯಾರಿಕೆಯನ್ನು ತಮ್ಮ ಉಪಜೀವನವಾಗಿ ನಡೆಸುತ್ತಿರುವವರು, ಮಂತ್ರಿಗಳ ಕಾರಿಗಿಂತಲೂ ಹೆಚ್ಚಿನ ಬೆಲೆಯುಳ್ಳಂತಹ ಕಾರುಗಳಲ್ಲಿ ಸಂಚರಿಸುತ್ತಿರುತ್ತಾರೆ. ಇವರು ಕಾರಿನಲ್ಲಿ ಕುತುಕೊಂಡು ಹಾರನ್ ಮಾಡಿದರೇ ಸ,ರಿ, ಗ,ಮ, ಪ,ದ,ನಿ,ಸಾ, ಎಂದು ಕುಳಿತುಕೊಂಡೇ ಹಾಡನ್ನು ಕೇಳಬಹುದು. ಇಂತಹ ಜನರಿರುವ ಕಡೆಯಲ್ಲಿ ಈ ಪಾನ ಪ್ರತಿಬಧಂಕವನ್ನು ತೆಗೆದುಕೊಂಡು ಜಾರಿ ಮಾಡಬೇಕೆಂದು ತಂದರೆ ಇಲ್ಲಿ ಜಯಪ್ರದವಾಗುತ್ತದೆಯೋ ಎನ್ನುವುದನ್ನು ತಾವೇ ಆಲೋಚನೆ ಮಾಡಬೇಕು. ಇಂತಹವರ

(ಶ್ರೀ ಬಿ. ಕೆ. ನಾಗೂರು).

ಮೇಲೆ ಕಾನೂನನ್ನು ಜಾರಿ ಮಾಡಿದ್ದೇವೆಂದು ತಂದರೆ ಜಗತ್ತಿನಲ್ಲಿರುವ ಯಾವ ಬ್ರಹ್ಮ ಬಂದರೂ ತಡೆಯಲಿಕ್ಕೆ ಶಕ್ಯವಿಲ್ಲ. ಇಲ್ಲಿ ಪ್ರತಿಯೊಬ್ಬರೂ ಕಳ್ಳ ಬಟ್ಟಿ ಹೇಗೆ ಮಾಡುತ್ತಾರೆಂದರೆ, ಕಳ್ಳೀಹಾಲು ಮತ್ತು ಇನ್ನಾವುದೋ ಒಂದು ತರಹದ ಸಾಮಾನುಗಳು ಇಷ್ಟು ಎಂದು ಅದರಿಂದ ತಯಾರು ಮಾಡಿ ಅದನ್ನು ಜನಗಳಿಗೆ ಕುಡಿಸುತ್ತಾರೆ. ಕುಡಿಯುವ ಚಟವಿರುವವರು ಏನಾದರೂ ಮಾಡಿ ಕುಡಿದೇ ಕುಡಿಯುತ್ತಾರೆ. ಪೋಲೀಸಿನವರು ಇದ್ದರೂ ಅವರು ಅವರೊಡನೆ ಕುಡಿಯುವಂತೆ ಮಾಡುತ್ತಾರೆ. ದೇವರೇ ಇದ್ದರೂ ಕೂಡ ಅಂತಹ ಸಂದರ್ಭದಲ್ಲಿ ಕುಡಿಯುತ್ತಾರೆ. ಎಲ್ಲಿ ನಿಜವಾಗಿ ಯೋಗ್ಯವಾದ ಡ್ರಿಂಕ್ಸ್‌ಗಳು ಸಿಗುವುದಿಲ್ಲವೋ ಅಲ್ಲಿ ಬಟ್ಟಿಸಾರಾಯಿ ಮಾಡಿ ಕುಡಿಯುತ್ತಾರೆ. ಇದು ಮಾದರಿಯ ಮೈಸೂರಿನ ನಾಗರಿಕರಿಗೆಲ್ಲಾ ಗೊತ್ತು. ಅನೇಕರು ಈ ಕಾಂಗ್ರೆಸ್ಸಿನ ಮಂತ್ರಿ ಮಂಡಲದವರು ಏಕೆ ತೆಗೆದುಕೊಂಡು ಬಂದರು ಎಂದು ಕೇಳುತ್ತಿದ್ದಾರೆ. ನೀವು ಇನ್ನು ಹನ್ನೊಂದು ತಿಂಗಳು ಕಾಲ ಮಾತ್ರ ಇರುವಾಗ ಒಳ್ಳೆಯ ಹೆಸರನ್ನು ತೆಗೆದು ಕೊಂಡು ಹೋಗದೆ ಈಗ ಈ ಪಾನನಿಪ್ರತಿಬಂಧವನ್ನು ತಂದು ಮಾಡಿದರೆ ಇದು ಯಶಸ್ವಿಯಾಗುವುದಿಲ್ಲ. ಗಾಂಧಿಯವರು ಇದನ್ನು ಮೊದಲಿನಿಂದಲೂ ಜಾರಿಗೆ ತರಬೇಕೆಂದು ಹೇಳುತ್ತಿದ್ದರು ಎಂದು ಇಂದು ನೀವು ತಂದ ಜನಗಳ ವಿರೋಧವನ್ನು ಬೆಳೆಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳುತ್ತಿದ್ದೀರ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಗುರುವಿನ ಬಳಿಗೆ ಒಬ್ಬ ಶಿಷ್ಯನನ್ನು ತಯಾರು ಮಾಡಲಿಕ್ಕೆ ಎಂದು ಒಬ್ಬರು ಕಳುಹಿಸಿಕೊಟ್ಟರು. ಅವರು ಕಳುಹಿಸಿಕೊಡುವಾಗ ಶಾಸ್ತ್ರಗಳನ್ನು ಕಲಿಯುವಾಗ ಬೇರೆ ಯಾವ ಕಡೆಗೂ ಗಮನಕೊಡದೆ ಸರಿಯಾಗಿ ಕಲಿಯಬೇಕೆಂದು ಹೇಳಿಕಳುಹಿಸಿದರು. ಶಿಷ್ಯ ಕಲಿಯಲು ಗುರುವಿನ ಬಳಿಗೆ ಬಂದಾಗ ಗುರು ಆ ಶಿಷ್ಯನನ್ನು ಕುರಿತು ಪೂಜೆ ಮಾಡಲಿಕ್ಕೆ ಪತ್ರೆ ಮುಂತಾದವುಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದನು. ಅದಕ್ಕೆ ಶಿಷ್ಯನಾದವನು ನನ್ನ ತಂದೆಯವರು ಗಿಡವನ್ನು ಹತ್ತಬೇಡ ಎಂದು ಹೇಳಿದ್ದಾರೆ. ಅದರಿಂದ ಆಗುವುದಿಲ್ಲ ಎಂದನು. ಆ ನಂತರ ಶಿಷ್ಯನನ್ನು ಬಾವಿ ಹತ್ತಿರ ಹೋಗಿ ಒಂದು ಕೊಡ ನೀರನ್ನು ತೆಗೆದುಕೊಂಡು ಬಾ ಎಂದು ಹೇಳಿದನು. ಇದಕ್ಕೆ ಶಿಷ್ಯನಾದವನು ನಾನು ಬಾವಿ ಹತ್ತಿರ ಹೋಗಿ ನೀರು ಸೇದಲು ಹೋದರೆ ಮುಗ್ಗರಿಸಿ ಬಾವಿಗೆ ಬೀಳಬೇಕಾಗುತ್ತದೆ, ಅದರಿಂದ ಆಗುವದಿಲ್ಲ ಎಂದನು. ಮತ್ತೊಬ್ಬನು ಬಂದು ಸ್ವಾಮೀ, ನಮ್ಮ ಮನೆಗೆ ಊಟಕ್ಕೆ ಆಮಂತ್ರಣ ಕೊಟ್ಟಿದ್ದೇನೆ, ಬರಬೇಕು ಅಂದಾಗ ಶಿಷ್ಯನು ಆಗಲಿ ಸ್ವಾಮಿ, ಎಲ್ಲದಕ್ಕೂ ಬೇಡಾ ಅಂದರೆ ನೀವು ಕೋಪಮಾಡಿಕೊಳ್ಳುತ್ತೀರಿ. ಕಾರಣ ಈ ಊಟದ ಆಮಂತ್ರಣಕ್ಕೆ ನಾನು ಹೋಗಿ ಊಟಮಾಡಿಕೊಂಡು ಬರುತ್ತೇನೆ. ಅಂಥನಂತೆ ಹೀಗಾಗಿದೆ. ಈ ಗಾಂಧೀಜಿ ತತ್ವವನ್ನೂ ಅಷ್ಟೇ ಪಾನ ಪ್ರತಿಬಂಧಕಕ್ಕ ಅನ್ವಯಿಸಿ ಉಳಿದುದನ್ನು ಗಾಳಿಗೆ ತೂರಿದ್ದೀರಿ, ಇದೇ ಏನೂ ನಿಮ್ಮ ಗಾಂಧೀಜಿ ತತ್ವ?

5–00 P.M.

ಈ ವಿಷಯದಲ್ಲಿ ಮಹಾತ್ಮಾ ಗಾಂಧೀಜಿಯವರ ಪಾಲಿಸಿಯನ್ನು ಅಳವಡಿಸಿದ್ದೀರಾ ? ಈ ಬಗ್ಗೆ ಜನರ ಸಹಕಾರವಿಲ್ಲವೆಂಬುದಾಗಿ ಶ್ರೀಮಾನ್ ಕೊತಾವಳಿ ಅವರು ಹೇಳಿದರು. ನಾನು ಹೇಳುವುದಿಷ್ಟೇ. ಜನರ ಸಹಕಾರ ಕೊಟ್ಟಿದ್ದರಿಂದಲೇ ನಾವೆಲ್ಲರೂ ಇಲ್ಲಿ ಸದಸ್ಯರಾಗಿರುವುದು. 14 ಜನ ಅಖಂಡ ಮಂತ್ರಿಗಳಾಗಿಯೂ, 6 ಜನ ತುಂಡು ಮಂತ್ರಿಗಳಾಗಿ ಅತ್ತಕಡೆ ನೀವು ಕುತಿರುವುದು, ನಾವೂ ಸಹ ನಿಮ್ಮನ್ನು ಅತ್ತಕಡೆಯೇ ಕುಳ್ಳಿರಿಸಿದ್ದೇವೆ. ಇಲ್ಲದೆ ಹೋಗಿದ್ದರೆ, ನಾವು ಅಲ್ಲಿ ಕೂತುಕೊಳ್ಳುತ್ತಿದ್ದೆವು. ನೀವು ಇಲ್ಲಿ ಕೂರಬೇಕಾಗಿತ್ತು.

ಇನ್ನು ನೀರಾ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಆದರೆ ಪ್ರೊಹಿಬಿಷನ್ ಮಂತ್ರಿಗಳೇ ಈಗ ಈ ಸಭೆಯಲ್ಲಿಲ್ಲ. ಮಾದರೀ ಮೈಸೂರು ಜನರ ಆರೋಗ್ಯವನ್ನು

ಕೆಡಿಸುವುದಕ್ಕೆ ಹೋಗಬೇಡಿ ಎಂದು ನಾನು ಕಳಕಳಿಯಿಂದ ಹೇಳುತ್ತೇನೆ. ನೀರಾ ಪರ್ಮಿಟ್ಟುಗಳೂ ಸಹ ಈಗ ಬ್ಲಾಕ್ ಮಾರ್ಕೆಟ್ ಆಗುತ್ತಿವೆ. ಆದರೆ ಇಂತಹ ಪದ್ಧತಿಗಳು ಮೈಸೂರಿನಲ್ಲಿ ನಡೆಯುವಂತೆ ಮಾಡಬೇಡಿ ಎಂದು ನಾನು ಮತ್ತೊಂದು ಸಾರಿ ಕಳಕಳಿಯಿಂದ ಕೇಳುತ್ತೇನೆ. ಒಂದು ಕಡೆ ನೀರಾವನ್ನು ಕುಡಿಯಬೇಡಿ ಎಂದು ಹೇಳುತ್ತೀರಿ. ಇನ್ನೊಂದು ಕಡೆ ನೀರಾ ಕುಡಿದು ಜಗದಾಡಿರಿ, ಲಗಾಡ ಹೊಡೆಯಿರಿ ಎಂದು ಹೇಳುತ್ತೀರಿ. ನಿಜವಾಗಿ ನಮ್ಮ ರಾಜ್ಯದ ಮಂತ್ರಿಗಳಿಗೆ ಬುದ್ಧಿ ಏನಾಗಿದೆಯೋ ಗೊತ್ತಿಲ್ಲ. ಇಂತಹ ಸರ್ವ ಸಾಮಾನ್ಯವಾದ ವಿಷಯದಲ್ಲಿ ಈ ರೀತಿ ನೀವು ಫೇಲ್ ಆದರೆ, ಪರಮಾತ್ಮನಿಗೆ ನಾನು ಏನು ಹೇಳಬೇಕು ? ಅದರಲ್ಲಿ ಕೆಲವು ರಾಸಯಾನಿಕ ಪದಾರ್ಥಗಳನ್ನು ತುಂಬ ಹೆಂಡ ಮಾಡಿ ಸೀಸೆಗಳಲ್ಲಿ ತುಂಬಿ ಮಾರುತ್ತಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರೇ, ದಯವಿಟ್ಟು ನೀವೂ ನಾವೂ ಕೂಡಿಕೊಂಡು ಜನರ ಹಿತರಕ್ಷಣೆ ಮಾಡುವುದು ಪ್ರಥಮ ಕರ್ತವ್ಯವಾಗಿದೆ. ನಿಮಗೆ ಈ ವಿಷಯದಲ್ಲಿ ಎಷ್ಟು ಜವಾಬ್ದಾರಿ ಇದೆಯೋ ನಮಗೂ ಅಷ್ಟೇ ಇದೆ. ಈಚೆಗೆ ಹೆಂಡ ಮಾಡಿ ಪ್ರತಿಯೊಂದು ಕಡೆಗೂ ಕಳುಹಿಸಿ ಪರಿಶೀಲನೆಗಾಗಿ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಅಂದಮೇಲೆ ಪ್ರೋಹಿಬಿಷನ್ ಸಾಕಷ್ಟು ಆಗಿದೆಯೆಂದು ಹೇಳುವುದು ನಿಜವಾಗಿ ವ್ಯಸನಕರವಾದ ಸಂಗತಿ. ಏನು ಬೇಕೋ ಅವರಿಗೆ ಯಾವುದು ಅನುಕೂಲವೋ ಆ ರೀತಿ ಮಾಡುತ್ತಿದ್ದಾರೆಯೇ ವಿನಹ ಜನರ ಹಿತರಕ್ಷಣೆಯನ್ನು ನೋಡುತ್ತಿಲ್ಲ. ಜನರ ಹಿತರಕ್ಷಣೆಗಾಗಿ ಮಾಡುವ ಕಾರ್ಯಕ್ಕೆ ಸರ್ಕಾರದವರಿಗೆ ಜನರ ಸಹಕಾರ. ಬೆಂಬಲ ಇದ್ದೇ ಇರುತ್ತದೆ. ಆದ್ದರಿಂದ ನೀರಾ ಪರ್ಮಿಟ್ಟುಗಳನ್ನು ಕೊಡುವುದರಲ್ಲಿ ಉಂಟಾಗುತ್ತಿರುವ ಅನ್ಯಾಯವನ್ನು ಆದಷ್ಟು ಜಾಗ್ರತೆ ಸರ್ಕಾರದವರು ಹೋಗಲಾಡಿಸಬೇಕೆಂದು ನಾನು ಕಳಕಳಿಯಿಂದ ಕೇಳುತ್ತೇನೆ.

ಇನ್ನೊಂದು ವಿಷಯ ಚಿಕ್ಕಮಗಳೂರಿನಲ್ಲಿ ಇರತಕ್ಕ ಪೋಲೀಸರು ಸ್ಟೇಷನ್ ಜೈಲಿನಲ್ಲಿರತಕ್ಕ ಕಳ್ಳರನ್ನೇ ರಾತ್ರಿಯ ಹೊತ್ತು ಆಚೆಗೆ ಬಿಡುವುದು, ಅವರು ಕಳ್ಳವು ಮಾಡಿದಂತಹ ಪದಾರ್ಥಗಳನ್ನೆಲ್ಲ ಜೈಲಿನಲ್ಲಿಟ್ಟುಕೊಳ್ಳುವುದು ಆಮೇಲೆ ಎಲ್ಲರೂ ಹಂಚಿಕೊಳ್ಳುವುದು ಈ ರೀತಿ ಅಲ್ಲಿ ನಡೆಯುತ್ತಿದೆ. ಆದರೆ ಶ್ರೀಮಾನ್ ಚನ್ನಬಸಪ್ಪನವರು ಈ ಬಗ್ಗೆ ಯಾವರೀತಿ ಕ್ರಮತೆಗೆದು ಕೊಳ್ಳುತ್ತಾರೆ ಎಂಬುದನ್ನು ನಿಜವಾಗಿ ಅವರು ಹೇಳಿದ ರೀತಿಯಲ್ಲಿಯೇ ಇರುತ್ತಾರೋ ಇಲ್ಲವೋ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಎರಡು ಕೋಟಿ ಕನ್ನಡಿಗರ ಸ್ವತ್ತನ್ನು ಪೋಲಿಸ್ ಅಧಿಕಾರಿಗಳೇ ಕಳ್ಳರ ಸಹಾಯದಿಂದ ರಾತ್ರಿಹೊತ್ತು ಬಂದಂತಹ ಕಳ್ಳವು ಸಾಮಾನುಗಳನ್ನು ಹಂಚಿಕೊಳ್ಳುತ್ತಿದ್ದಾರೆಂಬ ಪ್ರಶ್ನೆಬಂದರೆ ಇನ್ನೇನು ಗತಿ ! ಈ ರೀತಿಯಾಗಿ ಪೋಲೀಸ್ ಇಲಾಖೆ ನಡೆಯುತ್ತಿದೆ. ಯಾರೋ ಒಬ್ಬರು ಪ್ರಚಾರ ಮಾಡಿದ್ದಾರಂತೆ. ಅದೇನೆಂದರೆ ಪಾತಿವ್ರತ್ಯವನ್ನು ಪ್ರಚಾರ ಮಾಡಲಿಕ್ಕೆ ಪಾತರಗಾತೀನ ಪಗಾರ ಕೊಟ್ಟು ಇಟ್ಟರಂತೆ ಹಾಗಾಯಿತು, ಈ ಪೋಲೀಸರ ನೇಮಕ ಸ್ಟೇಷನ್ನುಗಳಲ್ಲಿ ಈ ಮಾತನ್ನು ಹೇಳುವುದಕೆ ನನಗೆ ಬಹಳ ವ್ಯಸನಕರವಾಗಿದೆ. ಒಟ್ಟಿನಲ್ಲಿ ಜನತೆ ನಿಮ್ಮ ಕಡೆಗೆ ಈ ಬಗ್ಗೆ ಹೆಚ್ಚಿನ ಸಹಕಾರ ಕೊಡುವುದರಿಂದ ನನ್ನ ಮಿತ್ರರಾದ ಕಾಂಗ್ರೆಸ್ ಸದಸ್ಯರೂ ಈ ಬಗ್ಗೆ ಬೆಂಬಲ ಕೊಟ್ಟು ಮಾತನಾಡಿರುವುದರಿಂದ ಜನರಿಗೆ ಹಿತವಾಗಿರತಕ್ಕ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ಮಹಾತ್ಮಗಾಂಧಿಯವರ ಫೋಟೊ ನೋಡಿ, ಅವರ ತತ್ವಗಳನ್ನೂ ಅನುಸರಿಸಿಕೊಂಡು ಬನ್ನಿ. ಇಲ್ಲದಿದ್ದರೆ ನಿಮ್ಮ ಮನಸ್ಸಿಗೆ ಬಂದಹಾಗೆ ಮಾಡಿದರೆ ನಿಜವಾಗಿ ಜನ ಒಪ್ಪುವುದಿಲ್ಲ. ಇನ್ನು ಬಹಳವಾಗಿ ನಿಮಗೆ ಹೇಳುವಂಥಾದ್ದೇನಿಲ್ಲಾ ಇಲ್ಲ. ಇನ್ನು ಕೆಲವೇ ದಿವಸಗಳಲ್ಲಿ ತಮಗೇ ಗೊತ್ತಾಗುತ್ತದೆ. ಆದ್ದರಿಂದ ಪೋಲೀಸರ ನೇಮಕದ ವಿಷಯದಲ್ಲಿ ದಕ್ಷರಾದ ಯೋಗ್ಯರಾಗಿರತಕ್ಕ ಪೋಲೀಸರನ್ನು ಅವರಿಗೆ ಸರಿಯಾದ ಪಗಾರವನ್ನು ಕೊಟ್ಟು ನೇಮಿಸಬೇಕೆಂದು ನಾನು ಕೇಳುತ್ತೇನೆ. ಅವರಿಗೆ ಆದಷ್ಟು ಮಟ್ಟಿಗೆ ಪಗಾರವನ್ನು ಹೆಚ್ಚುಮಾಡಬೇಕು. ಅಯೋಗ್ಯ ಪೋಲೀಸರ ಬಗ್ಗೆ ಕೂಡಲೇ ತಕ್ಕ ಕ್ರಮವನ್ನು ಕೈಗೊಳ್ಳಬೇಕು. ತಪ್ಪು ಮಾಡಿದಂತಹ ಪೋಲೀಸರನ್ನು ಸಸ್ಪೆಂಡಿನಲ್ಲಿಟ್ಟಿದ್ದೀರಿ. ಶ್ರೀಮಾನ್ ಚನ್ನಬಸಪ್ಪನವರೇ, ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಕೊಡುತ್ತೇನೆ. ಒಟ್ಟಿನಲ್ಲಿ ಮಂತ್ರಿಗಳು ಇನ್ನು ಮುಂದೆ ದಕ್ಷರಾದ

(ಶ್ರೀ ಬಿ. ಕೆ. ನಾಗೂರು)

ಮತ್ತು ಯೋಗ್ಯರಾದ ಪೋಲೀಸ್ ಅಧಿಕಾರಿಗಳನ್ನೇ ನೇಮಿಸಬೇಕು. ಇನ್ನೊಂದು ವಿಷಯವಿತ್ತು. ಅಧ್ಯಕ್ಷರು ಘಂಟೆ ಬಾರಿಸುತ್ತಿರುವುದರಿಂದ ಅಧ್ಯಕ್ಷರ ಮಾತಿಗೆ ಗೌರವ ಕೊಟ್ಟು ಮಾನ್ಯ ಶ್ರೀ ಚನ್ನಪ್ಪನವರಿಗೂ ಈ ಸಭೆಯುಲ್ಲಿ ಇಲ್ಲದೇ ಇರತಕ್ಕ ಶ್ರೀ ವೀರೇಂದ್ರ ಪಾಟೀಲ್ ಅವರಿಗೂ ಅವರು ಎಲ್ಲಿದ್ದರೂ ಅವರ ಕಿವಿಗೆ ನನ್ನ ಮಾತು ಮುಟ್ಟುತ್ತದೆಂದು ತಿಳಿದು ಮೈಸೂರು ನಾಗರಿಕರ ಆರೋಗ್ಯವನ್ನು ಕೆಡಿಸಲಿಕ್ಕೆ ಪ್ರಯತ್ನ ಮಾಡಬಾರದೆಂದು ನಾನು ಕಳಕಳಿಯಿಂದ ಕೇಳುತ್ತೇನೆ.

Sri C. M. ARUMUGHAM (K. G. F.).—Sir, I rise to a point of order. We have got before us three demands, including the police. So far as prohibition is concerned, no doubt, the Hon' ble Member can refer to prohibition in so far as its implementation is concerned and its success or otherwise is concerned. But, he is speaking about the policy itself. Is he in order to speak about the policy ?

Mr. CHAIRMAN.—As far as possible, it is better that Hon'ble Members confine their remarks to the subjects that are before the House.

Sri C. M. ARUMUGHAM.—I want a ruling on this: I do not want a suggestion.

Mr. CHAIRMAN.—I have heard his sufficiently. His point of order is, that he cannot refer to prohibition. What the Hon'ble Member was quoting was about some defects in the enforcement of prohibition. I do not think there is anything wrong.

Sri C. J. MUCKANNAPPA.—Sir, the Hon' ble Speaker is very wrong in Jumping to such a conclusion.

Mr. CHAIRMAN.—He should resume his seat. What Sri Arumugham wanted to say is that Dr. Nagoor cannot proceed on the policy in regard to prohibition. Where is the point of order in it ?

Sri C. M. ARUMUGHAM.—Mr. Speaker, Sir, you kindly hear us and then give the ruling. Whatever you say must be in the form of a ruling. If you say, he can speak, I will sit down. But, do not say 'where is the point of order in it'. I have raised a point and you must give a ruling. He is discussing a policy matter. It is differing from speaking about enforcement of prohibition by the police. Is there not a difference?

Sri M. C. NARASIMHAN (K. G. F.).—Sir, there is some force in what my friend has said. The best thing is, to suggest to the other member not to traverse off the subjects.

Mr. CHAIRMAN.—That is what I have said. The Hon'ble Member may continue his speech.

ಶ್ರೀ ಬಿ. ಕೆ. ನಾಗೂರ್.—ಈ ಗಲಾಟೆಯಲ್ಲಿ ನಾನು ಹೆಚ್ಚಿಗೆ ಹೇಳಲಿಕ್ಕೆ ಪ್ರಯತ್ನ ಪಡಲಾರೆ. ಧಾರ್ವಾಡದ ಹಾವೇರಿ ಊರಿನ ಹತ್ತಿರ ಒಂದು ಪೋಲೀಸ್ ಸ್ಟೇಷನ್ ಅಲ್ಲಿ ಸುಮಾರು 16 ಸಾವಿರ ರೂಪಾಯಿಗಳ ಮುದ್ದೆಮಾಲು ಕಳುವು ಮಾಡಿರತಕ್ಕ ಸಾಮಾನುಗಳು ಪೋಲೀಸ್ ಸ್ಟೇಷನ್ನಿನ ಲ್ಲಿತ್ತು. ಅದು ಪೋಲೀಸ್ ಸ್ಟೇಷನ್ನಿನಲ್ಲಿಯೇ ಪುನಃ ಕಳುವಾಗಿದೆ. ಇದು ನಿಜವಾದ ಸಂಗತಿ,

ನಾನು ಬಹಳವಾಗಿ ವ್ಯಸನ ಪಡಬೇಕಾದ ಸಂಗತಿಯಾಗಿದೆ. ಇನ್ನು ಮುಂದಾದರೂ ಆರೀತಿ ಆಗದಂತೆ ಮಂತ್ರಿಗಳು ಬಹಳ ದಕ್ಷರಾದ ಮತ್ತು ಯೋಗ್ಯರಾದ ಪೋಲೀಸ್ ಅಧಿಕಾರಿಗಳನ್ನು ಸ್ಟೇಷನ್ನುಗಳಲ್ಲಿ ನೇಮಿಸಿ ಇಲಾಖೆಯ ಆಡಳಿತವನ್ನು ದಕ್ಷರೀತಿಯಿಂದ ಶ್ರೀಮಾನ್ ಚನ್ನಬಸಪ್ಪನವರು ನೋಡಿಕೊಳ್ಳುತ್ತಾರೆಂಬ ಭರವಸೆ ನನಗಿದೆಯೆಂದು ಹೇಳುತ್ತೇನೆ. ಒಳಾಡಳಿತ ಮಂತ್ರಿಗಳು ಮತ್ತು ಉಪಮಂತ್ರಿಗಳು ಬಹಳ ಶಾಂತರೀತಿಯಿಂದ ಜನರ ಕಷ್ಟಸುಖಗಳನ್ನು ನಿವಾರಿಸುವ ಉದ್ದೇಶದಿಂದ ನನ್ನ ಮಾತುಗಳನ್ನು ಕೇಳುತ್ತಿದ್ದಾರೆ. ಅದರೆ 2 ಕೋಟಿ ಕನ್ನಡಿಗರಿಗೆ ಹಿತವನ್ನುಂಟುಮಾಡುವುದಕ್ಕೆ ಹೆಸರುವಾಸಿಯಾದ ಶಕ್ತಿಯನ್ನು ತಮಗೆ ಭಗವಂತನು ಕೊಡಲಿ ಎಂದು ಕೇಳಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ನ್ಯಾಯಾಂಗ, ಬಂದೀಖಾನೆ ಮತ್ತು ಪೋಲೀಸ್ ಡಿಮ್ಯಾಂಡುಗಳನ್ನು ಅನುಮೋದಿಸುತ್ತ, ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಮೊಟ್ಟಮೊದಲನೆಯ ನ್ಯಾಯಾಂಗ ಖಾತೆಯನ್ನು ತೆಗೆದುಕೊಳ್ಳುತ್ತೇನೆ. ನ್ಯಾಯಾಂಗ ಅನ್ನತಕ್ಕಂಥಾದ್ದು ಮಾನವನ ಒಂದು ಧರ್ಮದ ಪ್ರಾಮುಖ್ಯವಾದ ಒಂದು ಅಂಗ. ಮನುಷ್ಯನು ಈ ನ್ಯಾಯವನ್ನು ಸಂಪಾದನೆ ಮಾಡಬೇಕಾದರೆ ಅವನು ಹೊರತಕ್ಕಂಥ ಪರಿಶ್ರಮವನ್ನು ಈ ಸಂದರ್ಭದಲ್ಲಿ ಸ್ವಲ್ಪ ಹೇಳಬೇಕಾಗಿದೆ. ಈ ನ್ಯಾಯವನ್ನು ತಡೆಯುವುದಕ್ಕಾಗಿ ಜನಗಳು ಬಹಳ ಕಷ್ಟಪಡಬೇಕಾಗಿದೆ. ನಮ್ಮ ದೇಶದಲ್ಲಿ ನ್ಯಾಯ ಎಷ್ಟು ಬೆಲೆ ಬಾಳುತ್ತಿದೆಯೆಂದರೆ, ಅದನ್ನು ಪಡೆಯಬೇಕಾದರೆ ಅದರ ನ್ಯಾಯವಾದ ಬೆಲೆಗಿಂತ 2-3 ರಷ್ಟನ್ನಾದರೂ ಖರ್ಚು ಮಾಡಬೇಕು; ಇಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ನ್ಯಾಯವನ್ನು ತಡೆಯಲು ಒದಗಿದೆ. ಈ ರೀತಿಯಾಗಿ ಒಂದಕ್ಕೆ-ತಿರಷ್ಟು ವೆಚ್ಚಮಾಡಿ, ಕಷ್ಟಪಟ್ಟು, ನ್ಯಾಯವನ್ನು ಪಡೆಯಬೇಕು, ಅದರಿಂದ ಪ್ರಯೋಜನ ಪಡೆಯಬೇಕೆಂದರೆ, ಸಾಧಾರಣವಾಗಿ ಸಾಮಾನ್ಯ ಜನಗಳಿಗೆ ಈ ನ್ಯಾಯವನ್ನು ದೊರಕಿಸಿಕೊಳ್ಳುವುದು ಸುಲಭಸಾಧ್ಯವೇ? ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಇನ್ನೂ ನ್ಯಾಯವನ್ನು ಸ್ವಲ್ಪ ಖರ್ಚಿನಲ್ಲಿ ಸುಲಭ ರೀತಿಯಲ್ಲಿ ಸಾಮಾನ್ಯ ಮನುಷ್ಯನಿಗೆ ದೊರಕಿಸಿಕೊಡುವಂಥ ವ್ಯವಸ್ಥೆ ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ, ಮೊನ್ನೆತಾನೆ ಕೇಳಿದ ಕೆಲವು ಸಿವಿಲ್ ಕೇಸುಗಳು 10-12 ವರ್ಷಗಟ್ಟಲೆ ನ್ಯಾಯಾಲಯಗಳಲ್ಲಿ ಪೆಂಡಿಂಗ್ ಇವೆಯೆಂದು ಹೀಗೆ ವರ್ಷಗಟ್ಟಲೆ ಕೋರ್ಟು ತಿರುಗಿ ತಿರುಗಿ ನ್ಯಾಯ ಪಡೆಯತಕ್ಕಂಥಾದ್ದು ಬಹಳ ಕಷ್ಟದಾಯಕವಾದುದು. ಹೋಗಲಿ ಈ ನ್ಯಾಯವನ್ನು ಪಡೆಯಲು ಖರ್ಚು ಮಾಡುವ ಹಣ ಸ್ವಲ್ಪವೇ ಅಂದರೆ, ಆಗಲೆ ಹೇಳಿದ ಹಾಗೆ,ಒಂದಕ್ಕೆ ನಾಲ್ಕರಷ್ಟು ವೆಚ್ಚ ಮಾಡಬೇಕಾದ ಪ್ರಸಂಗಗಳು ಜನಗಳಿಗೆ ಸಂಭವಿಸಿವೆ. ಈ ರೀತಿಯಾಗಿ ಆಗದಂತೆ ಜನಗಳಿಗೆ ಅದರಲ್ಲಿಯೂ ಸಾಮಾನ್ಯ ಜನಗಳಿಗೆ ನ್ಯಾಯರಕ್ಷಣೆ ಸುಲಭ ರೂಪದಲ್ಲಿ ಮತ್ತು ಕಡಿಮೆ ದರದಲ್ಲಿ ದೊರಕುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ನ್ಯಾಯವನ್ನು ಶೀಘ್ರವಾಗಿ ದೊರಕಿಸಿಕೊಡದಿರಲೂ ಬೇಕಾದಷ್ಟು ಕಾರಣಗಳಿರಬಹುದು: ಅದಕ್ಕೆ ಕಾರಣರು ಪ್ರತಿವಾದಿಗಳಿರಬಹುದು. ಲಾಯರುಗಳಿರಬಹುದು. ಇವುಗಳು ಯಾವುದನ್ನು ಲೆಕ್ಕಿಸದೆ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ನ್ಯಾಯಜಾಗ್ರತೆಯಾಗಿ ಒದಗುವಂಥ ಒಂದು ವ್ಯವಸ್ಥೆಯನ್ನು ಕಲ್ಪಿಸಬೇಕು. ಮತ್ತು ನ್ಯಾಯ ಇತ್ಯರ್ಥವಾಗದೆ ಉಳಿದಿರತಕ್ಕಂಥ ಕೇಸುಗಳನ್ನು ಪರಿಶೀಲಿಸಿ ವರದಿ ಮಾಡಲು ಒಂದು ವ್ಯವಸ್ಥೆ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಬಂದೀಖಾನೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ: ನಮ್ಮ ಬಂದೀಖಾನೆಯನ್ನು ಯಾವುದೇ ಹಳೆಯ ಕಾಲದಲ್ಲಿ ಮಾಡಿರತಕ್ಕಂಥ ಶಿಷ್ಟಾಚಾರದಲ್ಲಿ ನಡೆಸಿಕೊಂಡು ಬರುತ್ತಿದ್ದೇವೆ. ಈ ಬಂದೀಖಾನೆಯಲ್ಲಿರುವ ಆಹಾರ ಸಂಸ್ಥೆಯೂ ಬಹಳ ಶೋಚನೀಯವಾದುದು. ಬಹುಶಃ ಅದು ಯಾರೂ ಒಂದು ತನಿಖೆ ಮಾಡತಕ್ಕಂಥ ಜವಾಬ್ದಾರಿ ಇಲ್ಲದೇನೇ,

(ಶ್ರೀ ಡಿ. ಮೂಕಪ್ಪ)

ಹರಾಜು ಮೂಲಕ ಯಾರೋ ಒಬ್ಬರ ಕೈಗೆ ವಹಿಸಿಬಿಟ್ಟ ಹಾಗಿದೆ. ಖೈದಿಗಳಿಗೆ ಅಲ್ಪ ಪ್ರಮಾಣದ ಮತ್ತು ಕನಿಷ್ಟ ವೆಚ್ಚದ ಆಹಾರವನ್ನು ಕೊಡುತ್ತಿರುತ್ತಾರೆ, ಏಕೆಂದರೆ ಅಲ್ಲಿರತಕ್ಕಂಥ ಖೈದಿಗಳು ತಮಗೆ ಆಗತಕ್ಕಂಥ ತೊಂದರೆಯನ್ನು ಹೇಳಿಕೊಳ್ಳದೆ ಇರತಕ್ಕಂಥ ಜನಗಳು. ಅಂಥವರನ್ನು ಕೂಡ ಸ್ವಲ್ಪ ಚೆನ್ನಾಗಿ ನೋಡಿಕೊಳ್ಳುವ ಯೋಚನೆ ಮಾಡಬೇಕು. ಖೈದಿಗಳಾದರೂ ಅವರಿಗೆ ಸಾಕಾದಷ್ಟು ಪ್ರಮಾಣದಲ್ಲಿ ಒಳ್ಳೆಯ ಆಹಾರ ದೊರಕುವ ಒಂದು ವ್ಯವಸ್ಥೆಯನ್ನು ಕಲ್ಪಿಸತಕ್ಕಂಥ ಒಂದು ಜವಾಬ್ದಾರಿಯನ್ನು ಕೂಡ ಸರ್ಕಾರದವರು ತೆಗೆದುಕೊಳ್ಳಬೇಕು. ಆಹಾರವನ್ನು ಒದಗಿಸುವುದಕ್ಕೆ ಹರಾಜು ಮೂಲಕ ಒಂದು ವ್ಯವಸ್ಥೆಯನ್ನು ಇಲ್ಲದಿದ್ದಾಗ್ಯೂ ಆ ವ್ಯವಸ್ಥೆ ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ ಎಂದು ಪರಿಶೀಲಿಸಲು ಒಂದು ಮಂಡಲಿಯನ್ನು ರಚನೆ ಮಾಡಿ, ಆ ಮಂಡಲಿಯಿಂದ ವರದಿ ತರಿಸಿಕೊಳ್ಳತಕ್ಕಂಥ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಹಾಗೇನೇ ಪೋಲೀಸು ಖಾತೆಯ ವಿಷಯದಲ್ಲಿ ಎರಡು ಮಾತು ಹೇಳಲಿಚ್ಛಿಸುತ್ತೇನೆ. ಪೋಲೀಸು ನಮ್ಮ ದೇಶದಲ್ಲಿ ಕಾನೂನು ಜಾರಿಮಾಡಿ ಶಾಂತಿಯನ್ನು ಜನಗಳಿಗೆ ಒದಗಿಸಿ, ರಕ್ಷಣೆ ಕೊಡುವಂತ ಜವಾಬ್ದಾರಿವುಳ್ಳ ಶಾಖೆ. ಇದು ನಿರೀಕ್ಷಿಸಿದಷ್ಟು ಮಟ್ಟಿಗೆ ನ್ಯಾಯಪಾಲನೆಯಾಗಿಲ್ಲವೆಂದು ಅನೇಕ ಮಾನ್ಯ ಸದಸ್ಯರು ಪೋಲೀಸು ಇಲಾಖೆಯನ್ನು ಟೀಕೆ ಮಾಡಿದರು ಈ ಟೀಕೆಯಲ್ಲಿ ಒಂದೆರಡು ಅಂಶಗಳು ವಿನಾ ಬಹುಭಾಗ ಅದು ಸರಿಯಾಗಿದೆಯೆಂದು ತಿಳಿದುಕೊಂಡಿದ್ದೇನೆ. ನಮ್ಮ ಕೆಲವು ಸ್ನೇಹಿತರು ಹೇಳಿದ ಹಾಗೆ, ಈ ಶಾಖೆಯಿಂದ ದೊರೆಯತಕ್ಕಂಥ ಪ್ರತಿಫಲ ಬಹು ಕಡಿಮೆಯಾಗಿದೆ. ಅದು ದೊರೆಯದಿರುವುದಕ್ಕೆ ಅದಕ್ಕೆ ಮುಖ್ಯವಾದ ಕಾರಣ ಬಂದಿದೆ, ಅದೇನೆಂದರೆ ಪ್ರೊಹಿಬಿಷನ್. ನಮ್ಮ ಮಾನ್ಯ ಸ್ನೇಹಿತರು ಈ ಪ್ರೊಹಿಬಿಷನ್ನನ್ನು ಪೋಲೀಸ್ ಇಲಾಖೆಯಿಂದ ಬೇರ್ಪಡಿಸಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ. ಅದನ್ನು ಬೇರ್ಪಡಿಸದೆ ಇರುವುದರಿಂದ, ಪೋಲೀಸ್ ಇಲಾಖೆಯಲ್ಲಿ ಒಂದು ಅಕ್ರಮ ಪ್ರಯೋಜನವನ್ನು ಹೊಂದುವ ಅವಕಾಶ ಎದ್ದು ಪೋಲೀಸರು ಅವರವರ ಕ್ರಮ ಅವ್ಯವಸ್ಥೆಗೆ ಬರುವುದಕ್ಕೆ ಕಾರಣವಾಗಿದೆ. ಈ ಅಕ್ರಮ ಪ್ರಯೋಜನವನ್ನು ಹೊಂದುವ ಸಂದರ್ಭ ಪ್ರೊಹಿಬಿಶನ್ನಿನಿಂದ ಈ ಇಲಾಖೆ ಹೊಂದಿರುವುದರಿಂದ, ಅದು ಅವ್ಯವಸ್ಥೆಯ ಆಡಳಿತಕ್ಕೆ ಇಡಾಗಲು ಅವಕಾಶವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಪೋಲೀಸು ವ್ಯವಸ್ಥೆಯನ್ನು ಉತ್ತಮಪಡಿಸುವ ದೃಷ್ಟಿಯಿಂದಲಾದರೂ ಕೂಡ ಈ ಪ್ರೊಹಿಬಿಷನ್ ಶಾಖೆಯನ್ನು ಬೇರೆ ಕಡೆಗೆ ಬದಲಾವಣೆ ಮಾಡುವುದು ಒಳ್ಳೆಯದು. ಈ ಪ್ರೊಹಿಬಿಷನ್ನನ್ನು ಜಾರಿಗೆ ತರಲು ಒಂದು ಕಡ್ಡಾಯವಾದ ಕ್ರಮವನ್ನು ತಂದಿದ್ದೀರೆಂದು ಕೇಳಿದ್ದೇನೆ; ಅದು ನಿಜವಿದ್ದರೆ ಬಹಳ ಅನ್ಯಾಯ. ಒಂದೊಂದು ಸ್ಟೇಷನ್ನಿನ ಪೋಲೀಸಿನವರೂ ಒಂದು ತಿಂಗಳಿಗೆ ಇಷ್ಟು ಸಂಖ್ಯೆಗೆ ಕಡಿಮೆಯಿಲ್ಲದೆ ಕೇಸುಗಳನ್ನು ಕೊಡಬೇಕೆಂದು ಕಂಪಲ್ಸರಿ ಮಾಡಿದ್ದಾರೆಂದು, ಅಷ್ಟಕ್ಕೆ ಕಡಿಮೆಬಿದ್ದರೆ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಯ ಸಂಬಳವನ್ನು ಖರ್ಚುಹಾಕಬಾರದೆಂದು. ಹೀಗೆ ನಿರ್ಬಂಧ ಹಾಕಿರುವುದರಿಂದ, ಪೋಲಿಸಿನವರಿಗೆ ಯಾವ ವಿಚಾರದಲ್ಲಿಯಾದರೂ ಸ್ವಲ್ಪ ಅಸಮಾಧಾನ ಉಂಟಾದರೆ, ಆ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳಲು ಕೇಸನ್ನು ಹಾಕುವ ಮನೋಭಾವ ಬಂದುಬಿಟ್ಟಿದೆ. ತಮ್ಮ ಒಂದು ಕರ್ತವ್ಯವನ್ನು ನಿರ್ವಹಿಸತಕ್ಕಂಥ ಒಂದು ಜವಾಬ್ದಾರಿಯಿಂದ, ಪೋಲಿಸರು ಜನಗಳ ಮೇಲೆ ಅನಾವಶ್ಯಕವಾಗಿ ಕೇಸು ತರತಕ್ಕಂಥ ಒಂದು ಸಂದರ್ಭವಿದೆ. ಅನೇಕ ಸಂದರ್ಭಗಳಲ್ಲಿ ಅನೇಕ ಜನಗಳನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು ಅಕ್ರಮ ಪ್ರಯೋಜನ ಹೊಂದುವ ಅವಕಾಶವಿದೆ. ಆ ಒಂದು ಪ್ರಯೋಜನವನ್ನು ದೊರಕಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಯಾರ ಮೇಲಾದರೂ ಕೇಸು ಹಾಕುವ ವೃತ್ತಿ ನಡೆಯುತ್ತಾ ಇದೆ. ಹಾಗೇನೇ ಪೋಲೀಸಿನವರಿಗೆ ಕೊಡತಕ್ಕಂಥ ಸಂಬಳ ಸಾರಿಗೆಗಳ ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರು ಆಗಲೇ ಹೇಳಿದ್ದಾರೆ. ಪೋಲೀಸು ಇಲಾಖೆಯ ಕೆಳದರ್ಜೆಯ ನೌಕ

ರರ ಸಂಬಳವೇನೋ ಬಹಳ ಕಡಿಮೆ. ಆದರೆ ಮೇಲು ಅಧಿಕಾರಿಗಳ ಸಂಬಳಕ್ಕೂ ಮತ್ತು ಕೆಳಗಿನ ನೌಕರರ ಸಂಬಳಕ್ಕೂ ಇಷ್ಟೊಂದು ವ್ಯತ್ಯಾಸವಿರುವುದು ಬಹುಶಃ ಯಾರಿಗೂ ಸಮಾಧಾನಕರವಾಗಿ ಕಾಣುವುದಿಲ್ಲ. ಇವರಿಗೆ ಜೀವನೋಪಾಯಕ್ಕಾಗಿ ಸಾಕಷ್ಟು ಸಂಬಳ ಕೊಡಬೇಕೆಂದು ಹೇಳುವುದರ ಜೊತೆಗೆ ನಮ್ಮ ಆರ್ಥಿಕ ಸ್ಥಿತಿಯನ್ನು ಸರಿದೂಗಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಹೇಳಬೇಕು. ಕೆಲವು ದೊಡ್ಡ ಅಧಿಕಾರಿಗಳ ಸಂಬಳ ಕಡಿಮೆ ಮಾಡಿ, ಬಡ ನೌಕರುಗಳ ಸಂಬಳವನ್ನು ಹೆಚ್ಚಿನ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಗೆ ತಂದರೆ, ಸಾಧಾರಣವಾಗಿ ನಮ್ಮ ಆರ್ಥಿಕ ಮಟ್ಟವನ್ನೂ ಸುಧಾರಿಸುವುದಕ್ಕೆ ಸಾಧ್ಯ. ಪೋಲೀಸು ಇಲಾಖೆಯಲ್ಲಿ ದಕ್ಷರಾದವರು ಕೂಡ ಕೆಲವರಿದ್ದಾರೆ. ನಾನು ಎಲ್ಲಾ ಪೋಲೀಸರೂ ಈ ಒಂದು ಅಕ್ರಮ ಮಾರ್ಗಗಳಿಗೆ ಒಳಗಾಗಿರುತ್ತಾರೆಂದು ಹೇಳುವುದಿಲ್ಲ. ಅಲ್ಪ ಸ್ವಲ್ಪ ದಕ್ಷ ಅಧಿಕಾರಿಗಳು ಯಾರಿದ್ದಾರೋ, ಅವರು ಇನ್ನೂ ತುಂಬ ದಕ್ಷತೆಯಿಂದ ಕೆಲಸವನ್ನು ಮಾಡತಕ್ಕಂಥ ಒಂದು ವ ವಸ್ಥೆಯನ್ನು ಮಾಡಬೇಕು. ಉದಾಹರಣೆಗೆ ಹೇಳುತ್ತೇನೆ. ನಮ್ಮ ಸಾಗರದ ಎ. ಎಸ್. ಪಿ. ವಿಚಾರದಲ್ಲಿ ಕೆಲವರು ಸರ್ಕಾರದಲ್ಲಿ ಅಪಾದನೆಗಳನ್ನು ಹೇಳಿದ್ದಾರೆ. ಬಹಳ ಅಪಾದನೆಗಳನ್ನು ಅವರ ಮೇಲೆ ಹೊರಿಸಿದ್ದಾರೆ. ಆದರೆ ನಾನು ಒಪ್ಪರಾರೆ. ನಿಜವಾಗಿಯೂ ಅವರು ಬಹಳ ದಕ್ಷರು. ನಮ್ಮ ಸಾಗರ ತಾಲ್ಲೂಕಿನಲ್ಲಿ ಅವರು ಹಗಲೂ-ರಾತ್ರಿ ಬಹಳ ಶ್ರಮಪಟ್ಟು ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಇವರು ಅಲ್ಲಿಗೆ ಬಂದಮೇಲೆ ಜನರ ನೀತಿಬಹಳ ಮಟ್ಟಿಗೆ ಉತ್ತಮಗೊಂಡಿದೆ. ಹೀಗೆ ಇವರು ನಮ್ಮ ಪ್ರಾಂತದಲ್ಲಿ ಜನರ ನೀತಿಯನ್ನು ಒಂದು ಹೆಚ್ಚಿನಮಟ್ಟದಲ್ಲಿ ಉತ್ತಮ ಪಡಿಸಿರುವುದರಿಂದ ಈಗಾಗಲೇ ಏನು ಕೆಲವು ಅಪಾದನೆಗಳನ್ನು ಮಾಡರಾಗಿದೆಯೋ ಅವುಗಳನ್ನು ನಾನು ಒಪ್ಪರಾರೆ.

Sri F. H. MOHSIN.—Sir, whatever I have said, I have said on my own information. I do not of course say that it may be wholly correct. But whatever I have said. I have said on the information which I have received. Of course, even there are people who really support the police attrocities even at Hubli. But that does not mean they are correct and I am wrong. I am a witness at Hubli. At the same time, I cannot say anything about Sagar. I stand corrected if the information of my friend is correct.

ಶ್ರೀ ಡಿ. ಮೂಕಪ್ಪ.—ಶ್ರೀ ಮೊಹಷೀನ್‌ರವರು ಅವರಿಗೆ ಬಂದ ವರ್ತಮಾನದ ಪ್ರಕಾರ ಅವರು ಹಾಗೆ ಹೇಳಿದ್ದರೆಂಬುದಾಗಿ ತಿಳಿಸುತ್ತಿದ್ದಾರೆ. ನಾನಾದರೋ ಈಗ ಸಾಗರ ತಾಲ್ಲೂಕಿನಿಂದ ಬಂದಿರತಕ್ಕವನಾಗಿದ್ದೇನೆ. ಈ ದಿವಸ ಅಲ್ಲಿ ಏನು ಪರಿಸ್ಥಿತಿಯಿದೆಯೋ ಅದನ್ನು ನಾನು ಕಣ್ಣಾರ ನೋಡಿದ್ದುದನ್ನೇ ನಾನೀಗ ಇಲ್ಲಿತಿಳಿಸುತ್ತಿದ್ದೇನೆ.

Sri H. M. CHANNABASAPPA.—Sir, one suggestion with the permission of the Chair. I think the Hon'ble Members make statements in regard to certain cases which have occurred or happened in certain places. It is always best to avoid reference to such statements. We do not know some of those cases may be under investigation; some may be pending in courts of law and any statements by Hon'ble Members of this House or by Ministers may not be conducive in the proper administration of justice. Therefore, I would appeal through you to the Hon'ble Members that they may be careful in making references to certain instance which have happened in their constituencies. They may pass on whatever details they may have to the Government confidentially. As far as possible, my request to them is they may try to avoid making detailed references to such instances.

ಶ್ರೀ ಡಿ. ಮೂಕಪ್ಪ.—ನಾನು ಈಗ ಇಷ್ಟೇ ಹೇಳುತ್ತೇನೆ. ಯಾವ ಪೋಲೀಸ್ ಅಧಿಕಾರಿಗಳು ದಕ್ಷತೆಯಿಂದ, ನಿರ್ವಂಚನೆಯಿಂದ ಕಷ್ಟಪಟ್ಟು ಜನಗಳಿಗೆ ನ್ಯಾಯ ದೊರಕಿಸಿ ಕೊಡುತ್ತಾರೋ ಅಂಥವರುಗಳಿಗೆ ನಾವು ನಮ್ಮ ಕೈಲಾದ ಮಟ್ಟಿಗೂ ಸಹಾಯಗಳನ್ನು ನೀಡಬೇಕಾದದು ನಮ್ಮ ಕರ್ತವ್ಯ. ಆದರೆ ಇದೇ ಸಂದರ್ಭದಲ್ಲಿ ನಾನು ಕೆಲವು ಪೋಲೀಸಿನವರು ಕೆಲಕೆಲವು ಸಂದರ್ಭಗಳಲ್ಲಿ ಮಾಡುತ್ತಿರುವ ಅಕ್ರಮ ನಡವಳಿಕೆಗಳನ್ನೂ ಸಹ ನಾನೀಗ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ನಮ್ಮ ಪ್ರಾಂತದಲ್ಲಿ ಈಗ ಹೊನ್ನೇಮರಡು ಪ್ರಾಜೆಕ್ಟಿನ ಕೆಲಸ ನಡೆಯುತ್ತಿದೆ. ಆ ಸ್ಥಳಕ್ಕೆ ಬಹು ಜನರು ನಾನಾ ಭಾಗಗಳಿಂದ ಬಂದು ಸೇರಿದ್ದಾರೆ. ಹಾಗೆ ಹೊರಗಡೆಯಿಂದ ಬಂದಿರತಕ್ಕ ಜನಗಳ ಬಗ್ಗೆ ಈ ಕೆಲವು ಪೋಲೀಸಿನವರು ನಡೆಸುತ್ತಿರುವ ವರ್ತನೆಯಿಂದ ಆ ಜನರಿಗಾಗತಕ್ಕ ಹಿಂಸೆ ತೊಂದರೆಗಳ ಒಂದು ಪರಿಸ್ಥಿತಿಯನ್ನು ಇಲ್ಲಯವರೆಗೂ ತಪ್ಪಿಸದೆ ಇರತಕ್ಕದ್ದು ತೀರಾ ವಿಷಾದಕರ. ಇಂಥ ವರ್ತನೆಗಳನ್ನು ದಕ್ಷತೆಯಿಂದ ಡಿ. ಎಸ್. ಪಿ. ಆಗಿರತಕ್ಕವರು ತಡೆಗಟ್ಟಬೇಕು. ಅವರಿಗೆ ಅಧಿಕಾರವಿದೆ. ಹೊನ್ನೆಮರಡಿನಲ್ಲಿ ಒಂದು ಹೆಚ್ಚಿನ ಮಟ್ಟದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿರುವುದರಿಂದ ದಿವಸ ಒಂದಕ್ಕೆ ನೂರಾರು ಲಾರಿಗಳು ಮರಳು, ಸುಣ್ಣ, ಇತ್ಯಾದಿಗಳನ್ನು ಹೇರಿಕೊಂಡು ಹಗಲೂ-ರಾತ್ರಿ ಭದ್ರಾವತಿಯಿಂದ ಶಿವಮೊಗ್ಗ ಸಾಗರಗಳ ಮಾರ್ಗವಾಗಿ ಹೊನ್ನೆಮರಡಿಗೆ ತಿರುಗುತ್ತಿರುತ್ತವೆ. ಈ ಲಾರಿಗಳಿಗೆ ಓಡತಕ್ಕ ಒಂದು ನಿರ್ದಿಷ್ಟ ವೇಳೆಯೇ ಇಲ್ಲದಿರುವುದರಿಂದ ಈ ಲಾರಿ–ಆಕ್ಸಿಡೆಂಟುಗಳು ಅಲ್ಲಿ ಬಹಳ ಜಾಸ್ತಿಯಾಗಿರುತ್ತೆ. ಅಲ್ಲಿ ನಾಲ್ಕಾರು ರೋಡುಗಳು ಒಂದೇ ಕಡೆ ಸೇರುತ್ತವೆ. ಅಲ್ಲಿ ತ ಲಾರಿಗಳ ಆಕ್ಸಿಡೆಂಟ್ ಬಹಳವಾಗಿದೆ. ಅದಕ್ಕಾಗಿ ನಾನು ಈಗ ಸಲಹೆಮಾಡುವುದೇನೆಂದರೆ ಈ ಲಾರಿಗಳ ರಾತ್ರಿ ಟ್ರಾಫಿಕನ್ನು ನಿಲ್ಲಿಸುವುದು ಒಳ್ಳೆಯದೆಂದು ಹೇಳುತ್ತೇನೆ. ರಾತ್ರಿ ಪ್ರಯಾಣದಲ್ಲಿ ಆ ಡ್ರೈವರುಗಳಿಗೆ ನಿದ್ರೆ ಇಲ್ಲದೆ ಇರುವುದರಿಂದ ಅವರು ಪ್ರಜ್ಞೆತಪ್ಪಿ ಈ ಲಾರಿಗಳನ್ನು ಓಡಿಸುತ್ತಿರುವುದೇ ಈ ಅನಾಹುತಗಳಿಗೆಲ್ಲ ಮುಖ್ಯಕಾರಣವಾಗಿದೆ. ಆದುದರಿಂದ ರಾತ್ರಿ ವೇಳೆಯಲ್ಲಿ ಈ ಲಾರಿಗಳ ಚಲನೆಯನ್ನು ನಿಲ್ಲಿಸುವುದು ಯೋಗ್ಯವಾದುದೆಂದು ಹೇಳುತ್ತೇನೆ. ಪೋಲೀಸ್ ಇಲಾಖೆಯು ಒಂದು ಜನ ರಕ್ಷಣೆಯ ಇಲಾಖೆ. ಈ ದಿವಸ ದೇಶಾದ್ಯಂತವೂ ಜನಸಂಖ್ಯೆ ಏರುತ್ತಿದೆ. ಈ ಪ್ರಜಾಸಂಖ್ಯೆ ದಿನದಿನಕ್ಕೂ ಹೇಗೆ ಬೆಳೆಯುತ್ತ ಬರುತ್ತಿದೆಯೋ ಅದೇ ಮಟ್ಟಕ್ಕೆ ಸರಿಯಾಗಿ ನಾವು ಈ ಪೋಲೀಸ್ ಸಿಬ್ಬಂದಿಯನ್ನೂ ಸಹ ಹೆಚ್ಚಿಸುತ್ತಾ ಬರಬೇಕು. ಈ ದಿವಸ ನಮ್ಮ ಸಾಗರ ತಾಲ್ಲೂಕಿನ ಜನಸಂಖ್ಯೆ ಒಂದಕ್ಕೆರಡರಷ್ಟು ಏರಿದೆ. ಆದಾಗ್ಯೂ ಹಳೇ ಕಾಲದಲ್ಲಿ ಏನು ಒಂದು ಸಿಬ್ಬಂದಿಯನ್ನು ಆ ಸಾಗರ ತಾಲ್ಲೂಕಿಗೆ ನಿಗಧಿ ಮಾಡಲಾಗಿತ್ತೋ ಈಗಲೂ ಅಲ್ಲಿ ಅಷ್ಟೇ ಸಿಬ್ಬಂದಿ ಇರುತ್ತೆ. ಈ ಹಿಂದೆ ಸಾಗರ ಟೌನಿನಲ್ಲಿ ಎಂಟು ಸಾವಿರ ಜನಸಂಖ್ಯೆಯಿತ್ತು. ಈಗ ಇಪ್ಪತ್ತನಾಲ್ಕು ಸಾವಿರಕ್ಕೂ ಮೇಲೇರಿದೆ. ಆದರೆ ಆ ಎಂಟು ಸಾವಿರ ಜನ ಸಂಖ್ಯೆಯಿದ್ದಾಗ ಏನು ಒಂದು ಸ್ಟಾಫ್ ಇತ್ತೋ ಈಗಲೂ ಅಷ್ಟೇ ಸ್ಟಾಫ್ ಇರುವುದು ಶೋಚನೀಯ. ಈ ಜನಸಂಖ್ಯೆ ಹೇಗೆ ಬೆಳೆಯುತ್ತದೋ ಅದಕ್ಕಾನುಸಾರವಾಗಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವುದೂ ಮತ್ತು ಅವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸುವುದೂ ಬಹು ಮುಖ್ಯವಾದ ವಿಷಯಗಳು. ಈ ನೇಮಕಾನುಸಾರವಾಗಿ ಕಾರ್ಯಕ್ರಮಗಳನ್ನು ಕೈಗೊಂಡು ದೇಶದಲ್ಲಿರತಕ್ಕ ಜನರ ನೀತಿಯನ್ನು ಉತ್ತಮಗೊಳಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಪೋಲೀಸ್ ಇಲಾಖೆಯಲ್ಲಿ ಇನ್ಸ್‌ಪೆಕ್ಟರ ಮೊದಲುಗೊಂಡು ಕಾನ್‌ಸ್ಟೇಬಲ್ ದರ್ಜೆಯವರೆಗೆ ಇರತಕ್ಕ ಪ್ರತಿಯೊಬ್ಬ ನೌಕರರಿಗೂ ಪ್ರತಿಯೊಂದು ತಾಲ್ಲೂಕ್ ಹೆಡ್–ಕ್ವಾರ್ಟರ್ಸಿನಲ್ಲೂ ಮತ್ತು ಪೋಲೀಸ್ ಠಾಣೆಗಳು ಎಲ್ಲೆಲ್ಲಿರುತ್ತವೋ ಅಲ್ಲೆಲ್ಲಾ ಇವರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ. ಇದು ಬಹಳ ಮುಖ್ಯವಾದ ವಿಚಾರ.

5–30 P.M.

ಇನ್ನೊಂದು ವಿಷಯ ಸರಕಾರದ ಗಮನಕ್ಕೆ ತರುತ್ತೇನೆ. ನೂರಾರು ವರ್ಷಗಳಿಂದ ತಾಳಗುಪ್ಪ ಹೆಡ್ ಕ್ವಾರ್ಟರ್ಸ್ ಆಗಿತ್ತು. ಈಗ ಅದನ್ನು ವಜಾ ಮಾಡಬೇಕೆಂಬ ಸರಕಾರಿ ಆರ್ಡರ್

ಆಗಿದೆ ಎಂದು ತಿಳಿಯುತ್ತದೆ. ಖಂಡಿತವಾಗಿ ಇದು ವಿಷಾದಕರ. ಮಧ್ಯ ಪ್ರದೇಶದಲ್ಲಿ ತಾಳಗುಪ್ಪ ಇದೆ. ಐದು ಕಡೆಯಿಂದ ರಸ್ತೆ ಬಂದು ಸೇರುತ್ತವೆ. ಇಂದೊಂದು ಜಂಕ್ಷನ್ ಆಗಿದೆ. ಅನೇಕ ಜನರು ಬಂದು ಹೋಗತಕ್ಕಂಥ ಇಂಥ ಮಧ್ಯ ಪ್ರದೇಶದಲ್ಲಿಯ ಪೋಲೀಸ್ ಸ್ಟೇಷನ್ ತೆಗೆದುಹಾಕಿದರೆ ಅನ್ಯಾಯವಾಗುತ್ತದೆ. ಈ ಊರಿನಲ್ಲಿ ಪೋಲೀಸ್ ಸ್ಟೇಷನ್ ಇರಬೇಕಾದುದು ಅತ್ಯಾವಶ್ಯಕವಾಗಿದೆ. ಅಲ್ಲಿ ಇದು ಉಳಿಯುವ ಹಾಗೆ ವ್ಯವಸ್ಥೆಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕೊನೆಯದಾಗಿ ಈ ಡಿಮ್ಯಾಂಡನ್ನು ನಾನು ಅನುಮೋದಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಒದಗಿಸಿಕೊಟ್ಟದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಜಿ. ಶಿವಪ್ಪ (ಚಿತ್ರದುರ್ಗ) ಸ್ವಾಮಿ, ಈ ಡಿಮ್ಯಾಂಡುಗಳನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳನ್ನು ತಿಳಿಸಬೇಕೆಂದು ಅಪೇಕ್ಷಿಸುತ್ತೇನೆ ನ್ಯಾಯಾಂಗ, ಪೋಲೀಸ್ ಮತ್ತು ಗೃಹಶಾಖೆಗಳಿಗೆ ಸಂಬಂಧಪಟ್ಟದ್ದು ಅತಿ ಮುಖ್ಯ ಡಿಮ್ಯಾಂಡುಗಳು. ಇವು ಜನರ ನಿತ್ಯ ಜೀವನಕ್ಕೆ ಸಂಬಂಧಪಟ್ಟದ್ದಾಗಿವೆ. ಈಗಾಗಲೇ ಮಾತನಾಡಿದ ಸ್ನೇಹಿತರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಅವರು ಹೆಚ್ಚಿನ ರೀತಿಯಲ್ಲಿ ಟೀಕೆ ಮಾಡಿ ಉತ್ಪ್ರೇಕ್ಷೆ ಮಾಡಿ ಹೇಳಿದ್ದಾರೆ ಅವರು ಹೇಳಿರತಕ್ಕ ವಿಚಾರಗಳಲ್ಲಿ ಸತ್ಯಾಂಶ ಪೂರ್ತಿಯಾಗಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ ಈಗ ನಾನು ಕೆಲವೊಂದು ವಿಚಾರಗಳನ್ನು ಹೇಳುತ್ತೇನೆ ಶ್ರೀಮಾನ್ ಮೂಕಪ್ಪನವರು ನ್ಯಾಯಾಂಗದ ಬಗ್ಗೆ ಸರ್ಕಾರದ ಗಮನಕ್ಕೆ ತಂದಿರತಕ್ಕ ಅಂಶಗಳನ್ನು ನಾನು ಸಮರ್ಥಿಸುತ್ತೇನೆ. ಬಹಳ ಹಿಂದಿನ ಕಾಲದಲ್ಲಿ ರಚಿಸಿದ ಕಾನೂನನ್ನು ಈಗ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆ ಮಾಡಬೇಕಾಗಿದೆ ಈಗ ಪ್ರಗತಿದಾಯಕ ಕಾನೂನನ್ನು ರಚನೆ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಸರಕಾರ ಯೋಚನೆ ಮಾಡತಕ್ಕಂಥಾದ್ದು ಅಗತ್ಯವಾಗಿದೆ ಎಂದು ಹೇಳುತ್ತೇನೆ. Justice delayed is justice denied ಎಂದಿದೆ ನ್ಯಾಯವನ್ನು ತೀವ್ರವಾಗಿ ದೊರೆಯುವಂತಾಗಬೇಕು. ತಡವಾಗಬಾರದು. ಇನ್ನೊಂದು ಮಾತು ಹೇಳುತ್ತಾರೆ ಕೋರ್ಟಿಗೆ ಹೋಗಿ ಗೆದ್ದವನು ಸತ್ತಹಾಗೆ ಮತ್ತು ಸೋತವನು ಹೆಣ ಆದ ಹಾಗೆ ಆಗುತ್ತಾನೆ. ಆದರಿಂದ ನ್ಯಾಯ ದೊರೆಯುವುದು ತಡವಾಗಬಾರದು ನ್ಯಾಯಾಂಗದಲ್ಲಿ ಸಮರ್ಪಕವಾದ ಜನರು ಇರಬೇಕು. ಟೀಕೆ ಮಾಡಬೇಕೆಂದು ನಾನು ಇದನ್ನು ಹೇಳುತ್ತಾ ಇಲ್ಲ. ಪ್ರಜಾ ಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ದೊರೆಯಬೇಕು.

ಎಕ್ಸಿಕ್ಯೂಟಿವ್ ಮತ್ತು ಲೆಜಿಸ್ಲೇಚರ್ ಇವೆರಡೂ ಬೇರೆ ಇರಬೇಕು ಎಂದು ಅನೇಕರು ಹೇಳುತ್ತಾರೆ. ಅನೇಕ ಸಂದರ್ಭಗಳಲ್ಲಿ Legislature has intefered with the executive. ಅದೇ ರೀತಿ ಸರ್ಕಾರದವರು ನ್ಯಾಯಾಂಗದ ನಿತ್ಯ ಜೀವನದಲ್ಲಿ ಸ್ವಲ್ಪ ಮಟ್ಟಿಗೆ ಪ್ರವೇಶಿಸಬಹುದು; ಆದರೆ too much inteference ಇರಬಾರದು. ನಮ್ಮ ಜನರ ಆಸೆ ಆಕಾಂಕ್ಷೆಗಳೇನಿರುತ್ತವೆಯೋ ಅವನ್ನು ನೆರವೇರಿಸುವುದಕ್ಕೆ ಬಹುಶಃ ಪ್ರಜಾ ಸರ್ಕಾರಕ್ಕೆ ತೊಂದರೆಯಾಗಿದೆ ಎಂದು ನನಗನ್ನಿಸುತ್ತದೆ. ನ್ಯಾಯಾಂಗದಲ್ಲಿ ನಮಗೆ ದೊರೆಯುತಕ್ಕ ನ್ಯಾಯ ಆದಷ್ಟು ಜಾಗ್ರತೆ ಹೆಚ್ಚು ಹಣದ ಖರ್ಚಿಲ್ಲದೆ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ದೊರೆಯುವುದು ಅತ್ಯಾವಶ್ಯಕ ಆ ದೃಷ್ಟಿಯಿಂದ ಈ ಸಭೆ ಮತ್ತು ಸಾಧ್ಯವಿದ್ದರೆ ಪಾರ್ಲಿಮೆಂಟ್ ಮತ್ತು ನ್ಯಾಯಾಂಗ ಇವೆಲ್ಲವೂ ಸೇರಿ ಯೋಚನೆ ಕೆಲವು ಬದಲಾವಣೆಗಳನ್ನು ಮಾಡತಕ್ಕದ್ದು ಸೂಕ್ತವಾದುದೆಂದು ನನಗನ್ನಿಸುತ್ತದೆ.

ಬಂದಿಖಾನೆಗಳ ವಿಚಾರವಾಗಿ ಶ್ರೀಮಾನ್ ಮುಕ್ಕಣಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ಉತ್ತರ ಪ್ರದೇಶದಲ್ಲಿ ಡಾಕ್ಟರ್ ಸಂಪೂರ್ಣನಂದರು ಜೈಲುಗಳಲ್ಲಿ ಹೆಚ್ಚಿನ ರೀತಿಯ ಸುಧಾರಣೆಗಳನ್ನು ದೇಶಕ್ಕೆಲ್ಲ ಒಂದು ಮಾದರಿಯಾದಂಥಾ ಸುಧಾರಣೆಗಳನ್ನು ಮಾಡಿರುವರೆಂದು ನಾನು ಪತ್ರಿಕೆಗಳಿಂದ ತಿಳಿದುಕೊಂಡಿದ್ದೇನೆ. ಜನರು ತಪ್ಪು ಮಾಡುತ್ತಾರೆ. ಇದಕ್ಕೆ ಅನೇಕ

(ಶ್ರೀ ಜಿ. ಶಿವಪ್ಪ)

ಸನ್ನಿವೇಶಗಳೂ ಸಂದರ್ಭಗಳೂ ಉಂಟಾಗುತ್ತವೆ. ಇಂಥ ಸಂದರ್ಭಗಳಲ್ಲಿ ನಾವು ಸಿಕ್ಕಿದರೂ ತಪ್ಪು ಮಾಡಬಹುದು. ಇಂಥ ಜನರನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಬೇಕು ಅವರಿಗೆ ಹೆಚ್ಚಿನ ರೀತಿಯಲ್ಲಿ ತೊಂದರೆ ಕೊಟ್ಟು ಕಠಿಣವಾದ ಶಿಕ್ಷೆಯನ್ನು ಕೊಟ್ಟು ಜೀವನದಲ್ಲ ಜಿಗುಪ್ಸೆಯುಂಟಾಗ ತಕ್ಕ ರೀತಿಯಲ್ಲಿ ವರ್ತಿಸುವುದು ಒಳ್ಳೆಯದಲ್ಲವೆನ್ನುವುದನ್ನು ಎಲ್ಲರೂ ಒಪ್ಪಿರುತ್ತಾರೆ. ಶ್ರೀಮಾನ್ ಚನ್ನಬಸಪ್ಪನವರು ಇಂಥ ಹೊಸ ವಿಚಾರಗಳಲ್ಲಿ ಹೆಚ್ಚಿನ ಉತ್ಸುಕತೆಯುಳ್ಳವರು ಜೈಲುಗಳ ಸುಧಾರಣೆಗಳ ಬಗ್ಗೆ ವಿಚಾರ ನಡೆಸಿ ಉತ್ತರ ಪ್ರದೇಶದಲ್ಲಿ ಮಾಡಿರುವಂತೆ ಖೈದಿಗಳಿಗೆ ಸ್ವಾತಂತ್ರ್ಯ ಕೊಟ್ಟು, ಕೆಲಸ ಮಾಡುವ ರೀತಿಯಲ್ಲಿ ಬದಲಾವಣೆ ಮಾಡಿ ಅವರನ್ನು ಹೊರಗಡೆ ಕೆಲಸಗಳಿಗೆ ಕರೆದು ಕೊಂಡು ಹೋಗುವುದು ಈ ರೀತಿ ಮಾಡುವುದಕ್ಕೆ ಪ ಯತ್ನಮಾಡುವುದಗತ್ಯ ವೆಂದು ನನಗನ್ನಿಸುತ್ತದೆ. ನಮ್ಮಲ್ಲಿ ಅನೇಕ Nation building activities, ಕೆರೆ ಕಟ್ಟುವುದು ರಸ್ತೆ ಮಾಡುವುದು ಇಂಥ ಕೆಲಸಗಳಿಗೆ ಇವರನ್ನು ನಿಯೋಜಿಸಿ ಕೊಳ್ಳಬಹುದು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಿರ್ಜಾ ಸಾಹೇಬರ ಕಾಲದಲ್ಲಿ ಆ ರೀತಿ ಉಪಯೋಗಿಸು ತ್ತಿರಲಿಲ್ಲವೇ ?

ಶ್ರೀ ಜಿ. ಶಿವಪ್ಪ.—ಅವರು ಮಾಡುತ್ತಿದ್ದುದು ಬೇರೆ.

ಶ್ರೀ ಎಂ. ಸಿ. ನರಸಿಂಹನ್.—ವಿಧಾನಸೌಧವನ್ನು ಕಟ್ಟಲು ಉಪಯೋಗ ಮಾಡಿದರು.

ಶ್ರೀ ಜಿ. ಶಿವಪ್ಪ.—ಅದೇ ರೀತಿ ರಾಷ್ಟ್ರಕ್ಕೆ ಉಪಯೋಗವಾಗುವ ರೀತಿಯಲ್ಲಿ, ಅವರು ಕಷ್ಟ ಪಟ್ಟು ಕೆಲಸ ಮಾಡಿದುದಕ್ಕೆ ವೇತನವನ್ನು ಕೊಟ್ಟು ಆ ಹಣ ಅವರಿಗೆ ಬಿಡುಗಡೆಯಾದಾಗ ಅವರಿಗೆ ಹೋಗತಕ್ಕ ರೀತಿಯಿಂದ ಮಾಡಿದರೆ ಅವರ ನೀತಿ ಬದಲಾವಣೆಯಾಗುವುದರಲ್ಲಿ ಸಂಶಯವಿಲ್ಲ ವೆಂದು ನನಗನ್ನಿಸುತ್ತದೆ.

ಪೋಲೀಸ್ ಇಲಾಖೆಯ ವಿಚಾರದಲ್ಲಿ ಅನೇಕ ನಿದರ್ಶನಗಳನ್ನು ಕೊಟ್ಟಿರುತ್ತಾರೆ. ಪೋಲೀಸ್ ಕೆಟ್ಟು ಹೋಗಿದೆ.-ಪೋಲೀಸ್ ಆಡಳಿತದಲ್ಲಿ ದರ್ಪವಿಲ್ಲ, ನೀತಿಯಿಲ್ಲ, ನ್ಯಾಯವಿಲ್ಲ ಎಂದು ಹೇಳಿದರು. ಪೋಲೀಸ್ ಆಡಳಿತ ಸಂಪೂರ್ಣವಾಗಿ ಕೆಟ್ಟು ಹೋಗಿದೆ ಎಂದು ಹೇಳಲು ತಯಾರಿಲ್ಲ. ಪೋಲೀಸಿನವರೂ ನಮ್ಮವರೇ ಸಂದರ್ಭ ಸನ್ನಿವೇಶಗಳಿರುವ ಕಾರಣದಿಂದ, ಮತ್ತು ಇತರ ಕಾರಣಗಳಿಂದ ಲಂಚರುಷುವತ್ತುಗಳಿಗೆ ಕೆಲವರು ಸಿಕ್ಕಿರಬಹುದು. ಎಲ್ಲರೂ ಹಾಗೆಯೇ ಸಿಕ್ಕಿದ್ದಾರೆಂದು ಹೇಳಿದರೆ ತಪ್ಪಾಗುತ್ತದೆ. ಇವರನ್ನು ಸರಿಪಡಿಸ ತಕ್ಕವರೂ ನಾವೇ ಆಗಿದ್ದೇವೆ. ಅವರಿಗೆ ಲಂಚ ಕೊಡುವುದನ್ನು ಪತ್ತೆ ಮಾಡತಕ್ಕ ಜವಾಬ್ದಾರಿಯೂ ನಮ್ಮ ಮೇಲಿದೆ. ಶ್ರೀಮಾನ್ ಮುಕ್ಕಣ್ಣಪ್ಪ, ಶ್ರೀಮಾನ್ ನರಸಿಂಹನ್–ಹೀಗೆ ಎಲ್ಲರ ಮೇಲೆಯೂ ಇದೆ. ಹಾಗೆಯೇ ಇಂಥ ಒಂದು ವಾತಾವರಣವನ್ನು ತಪ್ಪಿಸಿ ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯವನ್ನುಂಟು ಮಾಡುವುದು ನಮ್ಮಗಳ ಕರ್ತವ್ಯ. ಇಷ್ಟು ಹೇಳಿದ ಮಾತ್ರಕ್ಕೆ ಅದರಲ್ಲಿ ಲೋಪ ದೋಷಗಳಿಲ್ಲ. ಅವರು ತಪ್ಪು ಮಾಡುವುದಿಲ್ಲವೆಂದು ಹೇಳಲಿಕ್ಕೆ ಹೋಗುವುದಿಲ್ಲ. ಅನೇಕ ಜನ ಪೋಲೀಸಿನವರು ಕೇಸನ್ನು ಬಿಗಿ ಮಾಡುತ್ತೇನೆಂದು ಒಂದು ಕಡೆಯಿಂದ ಹಣ ಪಡೆಯುತ್ತಾರೆ, ನಂತರ ಛಾರ್ಜ್ ಷೀಟ್‌ನಲ್ಲಿ ನಿಮಗೆ ಅನುಕೂಲ ಮಾಡಿಕೊಡುತ್ತೇನೆಂದು ಮತ್ತೊಂದು ಕಡೆಯಿಂದ ಹಣ ಪಡೆಯು ತ್ತಾರೆ. ಇಂಥ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಅದನ್ನು ಹೆಚ್ಚು ಉತ್ಪ್ರೇಕ್ಷೆ ಮಾಡು ವುದು ಸರಿಯಲ್ಲ. ಇಂಥದನ್ನು ಸರಿಪಡಿಸತಕ್ಕದು ಹೇಗೆ ಎಂದು ನೋಡಬೇಕು. ಇದರ ಜವಾಬ್ದಾರಿ ಸರ್ಕಾರದ ಮೇಲೆ, ಸಾರ್ವಜನಿಕರ ಮೇಲೆ ಮತ್ತು ಎಲ್ಲರ ಮೇಲೆಯೂ ಇದೆ. ಇಂಥ ಒಂದು ಸನ್ನಿವೇಶ ಒದಗದಂತೆ ಸಾರ್ವಜನಿಕರು ಪ್ರಯತ್ನ ಮಾಡತಕ್ಕದ್ದು ಉತ್ತಮವೆಂದು ನಾನು ಹೇಳಬೇಕಾಗಿದೆ.

ಕೆಲವು ಭಾಗ ಪೋಲೀಸಿನವರು ಒಳ್ಳೆಯವರಿದ್ದಾರೆ. ಅಂಥ ಅನೇಕ ನಿದರ್ಶನಗಳನ್ನು ಕೊಡ ಬಹುದಾಗಿದೆ. ನಾನು ಒಂದೇ ಒಂದು ಉದಾಹರಣೆಯನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಾನು ಹೇಳುವುದಕ್ಕೆ ಸಂಬಂಧಪಟ್ಟ ಕೇಸು ಕೋರ್ಟಿನಲ್ಲಿಲ್ಲ, ತೀರ್ಮಾನವಾಗಿದೆ ನಿಷ್ಠಾವಂತರೂ, ದಕ್ಷರೂ, ಯೋಗ್ಯರು. ಪೋಲೀಸ್ ಕೆಲಸದಲ್ಲಿ ನಿಸ್ಪೃಹರೂ ನಮ್ಮದು ದೇವರ ಕೆಲಸವೆನ್ನುವ ದೃಷ್ಟಿಯಿಂದ ಕೆಲಸ ಮಾಡುವವರು ಅನೇಕರಿದ್ದಾರೆ. ಅಂಥವರಿಗೆ ಪ್ರೋತ್ಸಾಹ ಕೊಡತಕ್ಕದ್ದು ನ್ಯಾಯ ಈ ಇಲಾಖೆಯಲ್ಲಿ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಕೊಡುವುದು ಇತ್ಯಾದಿಗಳನ್ನು ಕೊಡುವಾಗ ಅನೇಕ ಸಂದರ್ಭಗಳಲ್ಲಿ ಈ ಮಾನ್ಯ ಸದಸ್ಯರನ್ನು ಹತ್ತಿರ ಬಂದು ಕೇಳುವುದಿಲ್ಲ. ತಮಗೆ ಪ್ರಮೋಷನ್ ಬೇಕು ಎಂದು ಮೇಲ್ಪಟ್ಟ ಅಧಿಕಾರಿಗಳನ್ನು ಕೇಳುವುದಿಲ್ಲ. ಈ ಸಭೆಯ ಸದಸ್ಯರಾದ ಮಾನ್ಯ ದುಗ್ಗಪ್ಪನವರು ಮತ್ತು ನಾನೂ ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಒಂದು ದಿವಸ ಪ್ರಯಾಣ ಮಾಡುತ್ತಿದ್ದೆವು. ಆಗ ಹಿರಿಯೂರಿಗೆ 30–35 ದೂರದಲ್ಲಿ ಒಂದು ಲಾರಿ ನಾವು ಪ್ರಯಾಣ ಮಾಡುತ್ತಿದ್ದ ಬಸ್ಸಿನ ಹಿಂದೆ ಬಂತು. ನಮ್ಮ ಬಸ್ 40-45 ಮೈಲಿ ವೇಗದಲ್ಲಿ ಹೋಗುತ್ತಿತ್ತು. ಹಿಂದಿನಿಂದ ಬರುತ್ತಿದ್ದ ಲಾರಿ, fully loaded lorry 50 ಮೈಲಿಗಿಂತ ಹೆಚ್ಚು ವೇಗದಲ್ಲಿ ಹೋಗುತ್ತಿತ್ತು. ಲಾರಿಯವನು ನಮ್ಮ ಬಸ್ಸನ್ನು overtake ಮಾಡಲು. ಲಾರಿಯ ದೀಪಗಳನ್ನು ಆರಿಸಿ ನಮ್ಮ ಬಸ್ಸಿಗಿಂತ ಮುಂದೆ ಹೋದನು. ಹೀಗೆ ಹೋಗುವಾಗ ಬಸ್ಸಿನ ಪಕ್ಕದಲ್ಲಿ ಹೋಗುತ್ತಿದ್ದ ಒಬ್ಬ ಮನುಷ್ಯನ ಮೇಲೆ ಲಾರಿಯನ್ನು ಬಿಟ್ಟು ಮುಂದೆ ಹೋದರು ಒಬ್ಬ ಮನುಷ್ಯನ ಮೇಲೆ ಲಾರಿ ಹರಿಯಿತು ಎಂದು ಬಸ್ ಡ್ರೈವರ್ ಹೇಳಿದ. ಕೂಡಲೇ ನಾವು ಬಸ್ಸನ್ನು ನಿಲ್ಲಿಸಿ ನೋಡಲಾಗಿ ಅವನ ತಲೆ ಒಡೆದು ಹೋಗಿತ್ತು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹೋದಸಾರಿ ಅಪ್ಪಣೆ ಕೊಡಿಸಿದರಲ್ಲ!

ಶ್ರೀ ಜಿ. ಶಿವಪ್ಪ.—ಹೇಳಲು ಪ್ರಯತ್ನಮಾಡಿದೆ. ಸಬ್‌ಜುಡಿಸ್ ಆಗುತ್ತದೆಂದು ಹೇಳಿದ್ದರಿಂದ ಮುಂದೆ ಹೇಳಲಿಲ್ಲ. ಆ ಮನುಷ್ಯ ಬದುಕುವುದಿಲ್ಲವೆಂದು ತಿಳಿದು ಲಾರಿಯನ್ನು ಹಿಡಿಯಬೇಕೆಂದು ತೀರ್ಮಾನಿಸಿ, ಬಸ್ಸನ್ನು ಜೋರಾಗಿ ಬಿಡಬೇಕೆಂದು ಡ್ರೈವರನಿಗೆ ಹೇಳೀ ಬಸ್‌ಸ್ಟ್ಯಾಂಡಿಗೆ ಹೋಗುವ ಬದಲು ಪೋಲೀಸ್‌ಸ್ಟೇಷನಿಗೆ ಹೋಗಿ ಲಾರಿಯನ್ನು ಹಿಡಿಯಬೇಕೆಂದು ಚಳ್ಳಕರೆ, ದಾವಣಗೆರೆ, ಚಿತ್ರದುರ್ಗ ಈ ಮಾರ್ಗಗಳಲ್ಲಿ message ಕಳಿಸಲು ವ್ಯವಸ್ಥೆಮಾಡಿದೆವು. ಅದೇದಿವಸ ಶಿವಮೊಗ್ಗ ಡಿ. ಎಸ್. ಪಿ. ಆಗಿದ್ದ ರಾಯಚೂರ್ ಅವರ ಕೊಲೆಯಾಗಿದ್ದು ಅಕ್ಕಪಕ್ಕದ ಪೋಲೀಸ್ ಸ್ಟೇಷನ್‌ಗಳಿಗೆಲ್ಲ messages ಬಂದಿತ್ತು, ಒಬ್ಬ ಸಬ್‌ಇನ್ಸ್‌ಪೆಕ್ಟರ್ ಆದವನು ಸೂಪರಿಂಟೆಂಡೆಂಟರನ್ನು ಕೊಲೆಮಾಡಿ ತಪ್ಪಿಸಿಕೊಂಡು ಹೋಗಿದ್ದಾನೆ, ಅವನನ್ನು ಹಿಡಿಯಬೇಕೆಂದು message ಕಳಿಸಿದ್ದರು. ಇದು ನ್ಯಾಯವೊ ಅನ್ಯಾಯವೋ ನಮಗೆ ಗೊತ್ತಿಲ್ಲ. ಅವರು ಏನಾದರೂ ಮಾಡಿ ಈ ಲಾರಿಯನ್ನು ಹಿಡಿದುಕೊಡಬೇಕೆಂದು, ಚಿತ್ರದುರ್ಗಕ್ಕೆ ಒಂದು ಮೆಸೇಜನ್ನು ಕೊಟ್ಟು ಇಂತಹ ಲಾರಿ ಮುಂದೆ ಹೋಗುತ್ತಿದೆ ಹಿಡಿದುಕೊಳ್ಳಿ ಅಲ್ಲಿನ ಪೋಲೀಸು ಇನ್ಸ್‌ಪೆಕ್ಟರಿಗೆ ಕಳಿಸಿದರು. ಅಲ್ಲಿದ್ದ ಪೋಲೀಸಿನ ಇನ್ಸ್‌ಪೆಕ್ಟರವರು ದಾವಣಗೆರೆಗೆ ಹೋಗಬೇಕೆಂದು ಅವರಲ್ಲಿ ಏನೂ ಆಗ ವಾಹನಗಳಿಲ್ಲದಿದ್ದುದರಿಂದ ಪ್ರೈವೇಟಾಗಿರುವವರಿಂದ ಒಂದು ವ್ಯಾನನ್ನು ತೆಗೆದುಕೊಂಡು ಚಿತ್ರದುರ್ಗದ ಕಡೆಯಿಂದ ಹೊರಟರು. ಮೊದಲು ಹೋದ ಲಾರಿ ಹಿರಿಯೂರಿನ ಬಳಿ ಒಂದು ನಾಯಿ ಮೇಲೆ ಬಿಟ್ಟು ಇನ್ನೂ ಮುಂದೆ ಹೋಗಬಿಟ್ಟಿತ್ತು. ಯಾವಾಗಲೂ ಇನ್ಸ್‌ಪೆಕ್ಟರು ಮೆಸೇಜು ಕೊಟ್ಟು ವಾಹನ ತೆಗೆದುಕೊಂಡು ಬರಬೇಕು ಎಂದರೆ ಯೋಚನೆ ಮಾಡುತ್ತಾರೆ. ಸಾಮಾನ್ಯವಾಗಿ ಬರುವುದಿಲ್ಲ. ನಾವೇ ಹೋಗಿ This is a serious matter ಎಂದು ಹೇಳಿ ಮೆಸೇಜನ್ನು ಕೊಡಿಸಿದೆವು. ಚಿತ್ರದುರ್ಗದ ಇನ್ಸ್‌ಪೆಕ್ಟರವರು ಈ ವಿಚಾರ ತಿಳಿಸಿದ ಕೂಡಲೇ ವ್ಯಾನನ್ನು ತೆಗೆದುಕೊಂಡು ಹೊರಟರು ದಾವಣಗೆರೆಯಿಂದ ಶ್ರೀಮಾನ್ ರಾಯಚೂರ್‌ರವರನ್ನು ಕೊಲೆ ಮಾಡಿದ ಪೆರುಮಾಲ್ ಎಂಬುವರು ಈ ಲಾರಿಯನ್ನು ನಿಲ್ಲಿಸಲು ಕೈ ತೋರಿಸಿದರು. ಇದೆಲ್ಲಾ ನಡೆದ ಸಂಗತಿ. ನಾನೇನೂ ಇಲ್ಲಿ ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಮೆಸೇಜನ್ನು ಕೊಟ್ಟ ತಕ್ಷಣವೇ ಚಿತ್ರದುರ್ಗದ ಕಡೆಯ ಇನ್ಸ್‌ಪೆಕ್ಟರವರು ಧೈರ್ಯದಿಂದ ಮುನ್ನುಗಿ ತಮ್ಮ ಪ್ರಾಣದ ಹಂಗನ್ನೇ ತೊರೆದು ಯಾವರೀತಿ ಕೆಲಸ ಮಾಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಹಾವೇರಿಯಲ್ಲಿ

(ಶ್ರೀ ಜಿ. ಶಿವಪ್ಪ)

ಇಂತಹ ಅಧಿಕಾರಿಗಳು ಒಂದೂವರೆ ವರ್ಷಕಾಲ ಇದ್ದರು ಅಂತಹವರ ಹತ್ತಿರ ಸುಳ್ಳು ವ್ಯವಹಾರ ಗಳನ್ನು ಯಾರಾದರೂ ಮುಖಂಡರು, ಎಂ. ಎಲ್. ಎ. ಗಳು ಹೇಳಲಿಕ್ಕೆ ಬಂದರೂ ಯಾವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ನನಗೆ ತಿಳಿದಹಾಗೆ ಒಬ್ಬರು ಸಬ್-ಇನ್ಸ್‌ಪೆಕ್ಟರವರು 50–100 ಕೇಸುಗಳನ್ನು ಹಿಡಿದಿರುವ ನಿದರ್ಶನಗಳಿವೆ ಇಂತಹ ಉತ್ತಮವಾಗಿ ಧೈರ್ಯವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಉತ್ತೇಜನ ಕೊಡಬೇಕು. ಇಂತಹ ಒಳ್ಳೆಯ ಅಧಿಕಾರಿಗಳ ಹೆಸರು ಮಕ್ಕಳ ಬಾಯಲ್ಲಿಯೂ ಬಂದಿದ್ದನ್ನು ಕೇಳಿದ್ದೇನೆ. ಈ ಅಧಿಕಾರಿಗಳು, ಇಂತಹವರು ಸಮಾಜದ ಮುಖಂಡರು, ಇಂತಹ ಮಹಾ ಉನ್ನತ ವ್ಯಕ್ತಿಗಳು ನಮ್ಮ ದೇಶದಲ್ಲಿ ಮುಂದಕ್ಕೆ ಬರಬೇಕು ಎಂದು ಹೇಳಿ ಎಷ್ಟೋ ಜನಕ್ಕೆ warn ಕೂಡ ಮಾಡುತ್ತಿದ್ದರು. ಹೀಗೆ ಅನೇಕ ಸಂದರ್ಭಗಳಿವೆ. ಇಂತಹ ದಕ್ಷ ಅಧಿಕಾರಿಗಳಿಗೆ ನಾವು encouragement ಕೊಡಬೇಕು. ಅಂತಹ ಅಧಿಕಾರಿ ಗಳಿದ್ದರೆ ನಮ್ಮ ಪ್ರೋಹಿಬಿಷನ್ ಇನ್ನೂ ಜಯಪ್ರದವಾಗಿ ಆಗುತ್ತದೆ.

ಈ ಪಾನ ನಿರೋಧದ ವಿಚಾರದಲ್ಲಿ ಎರಡು ಮಾತು ಹೇಳಬೇಕೆಂದಿದ್ದೇವೆ. ಇದನ್ನು ಹೇಗಾದರೂ ಮಾಡಿ ಜಯಪ್ರದವಾಗಿ ಮಾಡಬೇಕೆಂದು ನಮ್ಮ ಆಸೆಯಾಗಿದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ನಮ್ಮ ಸ್ನೇಹಿತರು ಇದನ್ನು ಉತ್ಪ್ರೇಕ್ಷೆ ಮಾಡುತ್ತಾರೆ ಎಂದು ಹೇಳಿ ದರು. ಉತ್ಪ್ರೇಕ್ಷೆ ಮಾಡುವುದು ತಪ್ಪೇನಾಗಲಾರದು. ಸರಕಾರದವರು ಒಂದು ಪಾಲಿಸಿ ಯನ್ನು ಜನತೆಯ ಮುಂದಿಟ್ಟಾಗ ಅದನ್ನು implement ಮಾಡತಕ್ಕದ್ದು ನಮ್ಮ ಕರ್ತವ್ಯ ಎಂದು ಆಡಳಿತ ಪಕ್ಷದ ಮತ್ತು ವಿರೋಧಪಕ್ಷದ ಎಲ್ಲ ಸದಸ್ಯರುಗಳ ಕರ್ತವ್ಯ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ಇಲ್ಲಿ ಮಾತನಾಡುವಾಗ ಕೆಲವರು ಜನತೆಯ morale ನ್ನು ಕೆಡಿಸುವಂತಹ ಮಾತುಗಳನ್ನು ಹೇಳಬಾರದು. ಸರಕಾರದ ಘನ ಉದ್ದೇಶ ಈ ಪಾನ ನಿರೋಧ ವನ್ನು ಜಾರಿಗೆ ತರುತ್ತಿದ್ದಾರೆನ್ನುವುದಕ್ಕೆ ಸಂತೋಷಪಡಬೇಕು. ಹಾಗೇನೂ ಇಲ್ಲ ಕಾಣುತ್ತಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ನೀವೇ ಹೇಳುತ್ತೀರ. ಈ ಯೋಜನೆ ಸರಿಯಾಗಿಲ್ಲ ಕಡಿಮೆ ಯಾಗಿದೆ ಎನ್ನುತ್ತೀರಿ.

ಶ್ರೀ ಜಿ. ಶಿವಪ್ಪ.—ಕಡಿಮೆ ಎಂದು ಹೇಳುತ್ತ ಉತ್ಪ್ರೇಕ್ಷೆ ಮಾಡಿಲ್ಲ. ಕೆಲವಾರು ವರ್ಷ ಗಳಿಂದ ಕುಡಿಯುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಶ್ರೀಮಾನ್ ಮುಕ್ಕಣಪ್ಪ ನವರು ನನ್ನ ಸ್ನೇಹಿತರು ನನ್ನಮೇಲೆ ಅವರಿಗೆ ತುಂಬಾ ಅಭಿಮಾನ. ಅವರನ್ನು ಕೂಡ ಉತ್ಪ್ರೇಕ್ಷೆ ಮಾಡಬೇಡಿ. ನಿಜವಾದ ಸನ್ನಿವೇಶಗಳನ್ನು ತಿಳಿಸಿ. ಎಂದು ಹೇಳು ತ್ತಿದ್ದೇನೆ. ಕೆಲವರು ಕುಡಿಯತಕ್ಕವರು ನನ್ನ ಸ್ನೇಹಿತರೂ ಅನೇಕರಿದ್ದಾರೆ. ಕೆಲವುಕಡೆ ಕಳ್ಳ ಭಟ್ಟಿಸಾರಾಯಿ ಕೂಡ ಜಾಸ್ತಿ ಇದೆ. ಸಾಮಾನ್ಯವಾಗಿ ಕೆಲವರಿಗೆ ಈ ಪಾನ ನಿರೋಧದಿಂದ ಅನುಕೂಲವಾಗಿದೆ. ಕೆಲವರಿನ್ನು ಕುಡಿಯುತ್ತಿದ್ದಾರೆ. ಇತ್ತೀಚೆಗೆ ನವ ನಾಗರಿಕರು. ಈ ಕುಡಿಯುವುದನ್ನು ಕಲಿತ್ತಿದಾರೆ. ಕೆಲವರಿಗೆ ಅನುಕೂಲವಾಗುತ್ತದೆ ಎಂದು ಕೆಲವರು ತಾತ್ಸಾರ ಮನೋಭಾವದಿಂದ ಹೇಳುತ್ತಾರೆ. ಯಾರು ಕುಡಿಯುವವರು, ಇದನ್ನು ಹೇಗೆ ತಪ್ಪಿಸಬೇಕು ಮತ್ತು ಹೇಗೆ ಸರಿಪಡಿಸಬಹುದು ಎನ್ನುವುದಕ್ಕೆ ಎಲ್ಲರೂ ಪೋಲಿಸಿನವರಿಗೆ ಸಹಕಾರ ಕೊಟ್ಟರೆ ಇದನ್ನು ತಪ್ಪಿಸಬಹುದು. ಧೈರ್ಯದಿಂದ ಸತ್ಯವಾದದ್ದನ್ನು, ಜನತೆಯ ಹಿತದೃಷ್ಟಿಯಿಂದ ಹೇಳಬೇಕು ಮತ್ತು ಇದನ್ನು successful ಆಗುವುದಕ್ಕೆ ಪ್ರಯತ್ನ ಮಾಡಬೇಕು. ಈ ರೀತಿ ಸಹಕಾರ ಮಾಡಿದರೆ ನಾನು ಶ್ರೀಮಾನ್ ಚನ್ನಬಸಪ್ಪನವರಿಗೆ ಇನ್ನು ಹೆಚ್ಚಿನ ಪ್ರಯತ್ನಪಟ್ಟು ಶ್ರೀಮಾನ್ ವೀರೇಂದ್ರ ಪಾಟೀಲರು ಇವರು ಇಬ್ಬರೂ ಸೇರಿ ಒಂದು ಹೊಸದಾದ ನವ ಚೈತನ್ಯ ವನ್ನುಂಟುಮಾಡುವ ರೀತಿಯಲ್ಲಿ ಇದನ್ನು ತಹಬಂದಿಗೆ ತರಲು ಪ್ರಯತ್ನ ಮಾಡುತ್ತಾರೆ ಎಂದು

ನಂಬುತ್ತೇನೆ. ಇನ್ನು ಹೆಚ್ಚಿಗೆ ಹೇಳಲು ಅಪೇಕ್ಷೆ ಪಡುವುದಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—The House will now rise and meet tomorrow at 1 P.M.

The House adjourned at Six of the Clock to meet again at One of the Clock on Tuesday, the 4th April 1961.